# 1 ವಚನ ಸಿರಿ

ಘಟಕ 1 : ವಚನಸಿರಿ

ಸಮಯ : 15 ಗಂಟೆಗಳು

## ಕಲಿಕಾ ಸಾಮಗ್ರಿಗಳು

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ (ಡಿ.ವಿ.ಡಿ.)
- ಅಂತರ್ಜಾಲ
- ಸಾಕ್ಷ್ಯಚಿತ್ರಗಳು
- ಸಂಪನ್ಮೂಲ ವ್ಯಕ್ತಿಗಳು
- ಪರಾಮರ್ಶನ ಗ್ರಂಥಗಳು

## ಮೌಲ್ಯಗಳು ಹಾಗೂ ಮನೋಭಾವಗಳು

- ವಚನ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಯನ್ನು ತಿಳಿಯುವುದು.
- ವಚನ ಹಾಗೂ ಇತರ ಕಾವ್ಯ ಪ್ರಕಾರಗಳಲ್ಲಿನ ಸಾಮ್ಯ ಮತ್ತು ವ್ಯತ್ಯಾಸಗಳನ್ನು ತಿಳಿಯುವುದು.
- ವಚನಗಳನ್ನು ಹಾಡುವ ಮತ್ತು ಆಲಿಸುವುದು.
- ಸಮಾಜದಲ್ಲಿ ನೆಲೆಯಾಗಿರುವ ಅಸಮತೋಲನವನ್ನು ಗುರುತಿಸಿ, ಎದುರಿಸುವುದು.
- ವಚನಗಳಲ್ಲಿ ಪ್ರಯೋಗವಾದ ಭಾಷಾ ವೈಶಿಷ್ಟ್ಯವನ್ನು ತಿಳಿಯುವುದು.
- ಸಾಹಿತ್ಯ ಕ್ಷೇತ್ರದಲ್ಲಿ ವಚನಗಳ ಸ್ಥಾನಮಾನಗಳನ್ನು ತಿಳಿಯುವುದು.
- ಸಾಮಾಜಿಕ ಮೌಲ್ಯಗಳನ್ನು ತಿಳಿದುಕೊಳ್ಳುವುದು.

## ಮುನ್ನುಡಿ

ವಚನ ಸಾಹಿತ್ಯವು ವಿಶ್ವ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಸ್ಥಾನಮಾನವನ್ನು ಪಡೆದುಕೊಂಡು ಬೆಳೆದುಬಂದ ಒಂದು ಸಾಹಿತ್ಯ ಪ್ರಕಾರವಾಗಿದೆ. 12ನೇ ಶತಮಾನದಲ್ಲಿ ಶಿವಶರಣರಿಂದ ಮಹಾ ಪ್ರವಾಹದಂತೆ ವಿಪುಲ ಪ್ರಮಾಣದಲ್ಲಿ ವಚನಗಳು ರಚಿತವಾದವು. ಭಕ್ತಿಯ ಪ್ರಚಾರ ಹಾಗೂ ಸಮಾಜ ಸುಧಾರಣೆ ಇವೆರಡನ್ನು ಜೊತೆಯಾಗಿರಿಸಿಕೊಂಡು ಪ್ರಾಬಲ್ಯಕ್ಕೆ ಬಂದಿದ್ದ ವೀರಶೈವ ಧರ್ಮವು ಮತ ತತ್ವಗಳನ್ನು ಜನ ಸಾಮಾನ್ಯರಿಗೂ ತಿಳಿಸುವ ಸಲುವಾಗಿ ವಚನಗಳನ್ನು ಉತ್ತಮ ಮಾಧ್ಯಮವಾಗಿ ಬಳಸಿಕೊಂಡಿತು. ಜನರ ಆಡು ನುಡಿಗೆ ಸಮೀಪವಾದ ಭಾಷಾ ರೂಪದಲ್ಲಿ ವಚನಗಳನ್ನು ರಚಿಸಲಾಯಿತು. ವಚನ ಸಾಹಿತ್ಯವು ಉತ್ತಮ ಸಾಹಿತ್ಯ ಮೌಲ್ಯಗಳಿಂದೊಡಗೂಡಿಕೊಂಡು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿಯೇ ಬೆಳೆದುಬಂದಿತು.

ಸುಮಾರು 200ರಷ್ಟು ಮಂದಿ ತಮ್ಮ ಅನುಭವಗಳನ್ನು ಅನುಭವ ಮಂಟಪದಲ್ಲಿ ಮಂಡಿಸಿದರು. ಈ ರೀತಿಯ ಒಟ್ಟಾದ ಪ್ರಯತ್ನವೇ ವಚನವೆಂಬ ಪ್ರಕಾರವನ್ನು ಸಾಹಿತ್ಯಕ್ಕೆ ನೀಡಿತು. ಜೈನ ಸಾಹಿತ್ಯದ ಪ್ರಭಾವ ಹಿಂದಿನ ಕಾವ್ಯಗಳಲ್ಲಿ ವ್ಯಕ್ತವಾಗಿ ಕಾಣುತ್ತಿತ್ತು. ಇದರಿಂದ ಭಿನ್ನವಾದ ಒಂದು ಸಾಹಿತ್ಯ ಸೃಷ್ಟಿಯಾಗಿದೆ ವಚನ. 12ನೇ ಶತಮಾನದಿಂದೀಚೆಗೆ ವಿಪುಲ ಪ್ರಮಾಣದಲ್ಲಿ ಬೆಳೆದು ಬಂದ ಈ ಪ್ರಕಾರವನ್ನು ಇಂದಿನ ತಲೆಮಾರಿಗೆ ತಿಳಿಯಪಡಿಸಲು ಕರ್ನಾಟಕ ಸರಕಾರ ಈಗಾಗಲೇ 22000 ವಚನಗಳನ್ನೊಳಗೊಂಡ 9 ಸಂಪುಟಗಳನ್ನು ಪ್ರಕಟಿಸಿದೆ. ವಚನಗಳು ಜರ್ಮನ್, ಫ್ರೆಂಚ್ ಭಾಷೆಗಳಿಗೆ ಭಾಷಾಂತರಗೊಳ್ಳುತ್ತಿವೆ. ಇಂಗ್ಲೀಷ್, ಹಿಂದಿ, ತಮಿಳು ಮುಂತಾದ ಭಾಷೆಗಳಿಗೆ ಈಗಾಗಲೇ ಭಾಷಾಂತರಗೊಂಡಿವೆ. ಕಾಶ್ಮೀರಿ, ಮಲೆಯಾಳಂ ಭಾಷೆಗಳಿಗೆ ಭಾಷಾಂತರವಾಗುತ್ತಿದೆ. ಸುಮಾರು 2500 ವಚನಗಳ ಭಾಷಾ ಸಂಚಯವನ್ನು ಮಾಡುವ ಬೃಹತ್ ಯೋಜನೆಯಡಿಯಲ್ಲಿ ಈ ಕೆಲಸ ನಡೆಯುತ್ತಿದೆ.

ವಚನಗಳ ಹುಟ್ಟು, ಬೆಳವಣಿಗೆ ಹಾಗೂ ಸಾಹಿತ್ಯದಲ್ಲಿ ವಚನಗಳ ಸ್ಥಾನ ಮಾನ ಇತ್ಯಾದಿಗಳ ಅಧ್ಯಯನವನ್ನು ಈ ಘಟಕದಲ್ಲಿ ಅಳವಡಿಸಲಾಗಿದೆ. ಅದಕ್ಕಾಗಿ ನಡುಗನ್ನಡ ಕಾಲದ ವಚನಕಾರರಾದ ಜೇಡರದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ ಇವರ ವಚನಗಳನ್ನು ನೀಡಲಾಗಿದೆ. ಹೊಸಗನ್ನಡ ಸಂದರ್ಭದಲ್ಲಿ ಬಂದಿರುವ ವಚನಗಳ ಮಾದರಿಯನ್ನೂ ಇಲ್ಲಿ ಸೇರಿಸಲಾಗಿದೆ. ವಚನಗಳ ಆಲಿಸುವಿಕೆ, ಹಾಡುವಿಕೆ, ಆಸ್ವಾದನೆ ಅಲ್ಲದೆ ಅಂದಿನ ಸಾಮಾಜಿಕ ಜೀವನವನ್ನು ಅರಿತುಕೊಳ್ಳುವುದು, ವಚನಗಳ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ತಿಳಿಯುವುದು.... ಇತ್ಯಾದಿ ನೈಪುಣ್ಯಗಳನ್ನು ವಿದ್ಯಾರ್ಥಿಗಳಲ್ಲಿ ಕುದುರಿಸುವುದು ಈ ಘಟಕದ ಮುಖ್ಯ ಉದ್ದೇಶವಾಗಿದೆ.

# UNIT FRAME

**ಘಟಕ 1 : ವಚನ ಸಿರಿ** ಸಮಯ : 15 ಗಂಟೆಗಳು

## ಕಲಿಕಾ ಸಾಧನೆಗಳು

- ನಡುಗನ್ನಡ ಕಾಲದ ವಚನಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ಆಶಯಗಳನ್ನು ಸೂಕ್ತ ಸಂದರ್ಭಗಳಲ್ಲಿ ಬಳಸುತ್ತಾರೆ.
- ವಚನವೆಂಬ ಸಾಹಿತ್ಯ ಪ್ರಕಾರದ ಸಾಂಸ್ಕೃತಿಕ ಪರಂಪರೆಗಳನ್ನು ಕಂಡುಕೊಂಡು ವಿಮರ್ಶಿಸಿ, ಟಿಪ್ಪಣಿ ಬರೆದು, ವಿಚಾರ ಸಂಕಿರಣಗಳನ್ನು ನಡೆಸುತ್ತಾರೆ.
- ನಡುಗನ್ನಡ/ಹೊಸಗನ್ನಡ ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಅವುಗಳಲ್ಲಿನ ಸಾಮಾಜಿಕ ಜೀವನ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುತ್ತಾರೆ.

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ವಚನಗಳ ಹುಟ್ಟು, ಬೆಳವಣಿಗೆ ಮತ್ತು ಸಾಹಿತ್ಯದಲ್ಲಿ ವಚನಗಳ ಸ್ಥಾನಮಾನಗಳ ಪರಿಚಯ | • ಪೂರ್ವಜ್ಞಾನದ ಅವಲೋಕನ ಎಂಬ ನಿಟ್ಟಿನಲ್ಲಿ ವಿದ್ಯಾರ್ಥಿಗಳೊಡನೆ ಕೆಲವು ವಚನಗಳನ್ನು/ ವಚನಕಾರರನ್ನು ಕುರಿತು ಪ್ರಶ್ನಿಸಿ ತಿಳಿಯುವುದು.<br>• ವಚನದ ಹುಟ್ಟು ಬೆಳವಣಿಗೆಯ ಕುರಿತು ತಿಳಿಸಿಕೊಡುವುದು, ಲೇಖನವನ್ನು ಬರೆಸುವುದು.<br>• ಪ್ರಸ್ತುತ ವಚನಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು/ ಹಾಡಿಸುವುದು.<br>• ಹಾಡುವ / ಓದುವ ಸಾಮರ್ಥ್ಯವನ್ನು ಅಳೆಯುವುದು.<br>• ಅಧ್ಯಾಪಕರು ವಚನಗಳನ್ನು ಹಾಡುವರು.<br>• ವಚನಗಳ ಅಡಕ ಮುದ್ರಿಕೆಯನ್ನು ಕೇಳಿಸುವುದು.<br>• ಅನಂತರ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿಸಿ ಪ್ರತಿ ಗುಂಪಿಗೂ ಒಂದೊಂದು ಕೆಲಸ ನೀಡುವುದು.<br>ಅರ್ಥ, ನಾಮಪದ, ಕ್ರಿಯಾಪದ, ಸಂಧಿ, ಪದವಿಂಗಡಣೆ, ಸಮಾಸಪದ, ಅಂಕಿತ ನಾಮ, ನಾಣ್ನುಡಿ, ಒಗಟು, ಗಾದೆಮಾತು... ಇತ್ಯಾದಿಗಳನ್ನು ಪಟ್ಟಿ ಮಾಡಿಸುವುದು.<br>• ಗುಂಪಿನ ಚಟುವಟಿಕೆಗಳನ್ನು ಅವಲೋಕಿಸುವುದು. | ಕಿರು ಲೇಖನ<br><br>ಅರ್ಥ, ನಾಮಪದ, ಕ್ರಿಯಾಪದ ಸಂಧಿ, ಪದವಿಂಗಡಣೆ, ಸಮಾಸಪದ, ಅಂಕಿತನಾಮ, ನಾಣ್ನುಡಿ, ಒಗಟು ಗಾದೆಮಾತುಗಳ ಪಟ್ಟಿ. |

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ವಿವಿಧ ವಚನಗಳ / ವಚನಕಾರರ ಪರಿಚಯ | • ವಿವಿಧ ವಚನಕಾರರ ಪರಿಚಯವನ್ನು ಮಾಡಿಸುವುದು. ಅನಂತರ ಪ್ರಸ್ತುತ ಘಟಕದಲ್ಲಿ ನೀಡಲಾದ ವಚನಗಳ ಬಗ್ಗೆ ತಿಳಿಸುವುದು.<br>• ಪ್ರತಿಯೊಬ್ಬ ವಚನಕಾರನ ವಚನಗಳ ಆಸ್ವಾದನೆಯನ್ನು ಮಾಡಿಸುವುದು. ಅನಂತರ ಆಸ್ವಾದನ ಟಿಪ್ಪಣಿ ಬರೆಸುವುದು.<br>• ವಚನಗಳ ಸಾರ ಸಂಗ್ರಹವನ್ನು ಮಾಡುವುದು.<br>• ಸಂದೇಹರಹಿತವಾಗಿ ವಚನಗಳ ಸರಿಯಾದ ಅರ್ಥಗ್ರಹಣ<br>• ವಿವಿಧ ವಚನಕಾರರ ವಚನಗಳಲ್ಲಿ ಪ್ರಯೋಗವಾದ ಭಾಷಾ ವೈವಿಧ್ಯಗಳನ್ನೂ, ಭಾಷಾ ಸೌಂದರ್ಯವನ್ನು ತಿಳಿಸಿಕೊಡುವುದು.<br>• ಬೇರೆ ಬೇರೆ ವಚನಕಾರರ ವಚನಗಳಲ್ಲಿ ಕಂಡು ಬರುವ ಸಮಾನ ಆಶಯಗಳನ್ನು ಗುರುತಿಸುವುದು.<br>• ಗ್ರಂಥಾಲಯದ ಸಹಾಯದಿಂದ ವಚನಗಳ ಹುಟ್ಟು ಬೆಳವಣಿಗೆ ಹಾಗೂ ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಿ ವಿಚಾರಗೋಷ್ಠಿಯಲ್ಲಿ ಮಂಡಿಸುವುದಕ್ಕಾಗಿ ಪ್ರಬಂಧ ಬರೆಸುವುದು. | • ಆಸ್ವಾದನಾ ಟಿಪ್ಪಣಿ<br>• ಸಾರ ಸಂಗ್ರಹ<br>• ಸಮಾನ ಆಶಯಗಳ ವಚನಗಳ ಪಟ್ಟಿ<br>• ವಿಚಾರಗೋಷ್ಠಿಗಾಗಿ ಪ್ರಬಂಧ ತಯಾರಿ |

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಮಾಹಿತಿ ತಂತ್ರಜ್ಞಾನದ ಬಳಕೆ ಭಾಷಾಕಲಿಕೆಯಲ್ಲಿ ಅದರ ಪ್ರಾಧಾನ್ಯ | • ಮಾಹಿತಿ ತಂತ್ರಜ್ಞಾನದ ಮೂಲಕ ವಿವಿಧ ವಚನಕಾರರ ಜೀವನದ ಹಿನ್ನೆಲೆ, ಸಾಮಾಜಿಕ ಹಿನ್ನಲೆಯನ್ನು ತಿಳಿಸಿಕೊಡುವುದು.<br>• ವಚನ ರಚನೆಯ ಕಮ್ಮಟದಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡುವುದು.<br>• ಸಂಪನ್ಮೂಲ ವ್ಯಕ್ತಿಗಳಿಂದ ವಚನವನ್ನು ಹಾಡಿಸುವುದು.<br>• ವಚನ ಗಾಯನದ ವಿಭಿನ್ನ ರೀತಿಗಳನ್ನು ತಿಳಿಯುವುದು. | • ವಚನಗಳ ರಚನೆ<br>• ಹಾಡುವ ಸಾಮರ್ಥ್ಯ ಗಳಿಸಿ ಹಾಡುತ್ತಾರೆ. |

**ನೈಪುಣ್ಯಗಳು**

- ವಚನಗಳನ್ನು ಆಸ್ವಾದಿಸುವ ಹಾಗೂ ಆಸ್ವಾದನ ಟಿಪ್ಪಣಿಗಳನ್ನು ಬರೆಯುವ ಸಾಮರ್ಥ್ಯ
- ಆಶಯಕ್ಕೆ ಸಂಬಂಧಪಟ್ಟಂತೆ ವಚನಗಳನ್ನು ರಚಿಸುವ ಸಾಮರ್ಥ್ಯ
- ಮಾಹಿತಿ ತಂತ್ರಜ್ಞಾನದ ಬಳಕೆಯ ಸಾಮರ್ಥ್ಯ
- ಗುಂಪಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಸಾಮರ್ಥ್ಯ
- ವಚನಗಳನ್ನು ಹಾಡುವ ಸಾಮರ್ಥ್ಯ
- ಪರಿಣಾಮಕಾರಿ ಭಾಷಾ ಪ್ರಯೋಗ ಸಾಮರ್ಥ್ಯ

# TEACHER PLANNER

| | | |
|---|---|---|
| ಪಾಠದ ಹೆಸರು | : | ಅಳಿಮನದವನ ಭಕ್ತಿ |
| ದಿನಾಂಕ | : | |
| ನಿರೀಕ್ಷಿಸುವ ಸಮಯ | : | 3 ಘಂಟೆಗಳು |
| ವಿಷಯ | : | ಡಾಂಭಿಕ ವರ್ತನೆಯ ವಿಡಂಬನೆ |
| ಕಲಿಕಾ ಸಾಧನೆಗಳು | : | ವಚನಗಳ ಸಾರ ಸಂಗ್ರಹ ಲೇಖನ, ಆಸ್ವಾದನ ಟಿಪ್ಪಣಿ ಪ್ರಬಂಧ |
| ಆಶಯಗಳು | : | ಕರ್ತವ್ಯ ನಿಷ್ಠೆ, ಅತಿಯಾಸೆಯನ್ನು ಕೈ ಬಿಡುವುದು, ದೃಢ ಸಂಕಲ್ಪ, ಅಹಂಭಾವದ ತೊರೆಯುವಿಕೆ......ಇತ್ಯಾದಿ. |
| ನೈಪುಣ್ಯಗಳು | : | ವಚನಗಳ ಸಾರಸಂಗ್ರಹಿಸುವ ಸಾಮರ್ಥ್ಯವನ್ನು ಗಳಿಸುವುದು ಆಸ್ವಾದನ ಟಿಪ್ಪಣಿ ಬರೆಯುವ ಸಾಮರ್ಥ್ಯ ಗಳಿಸುವುದು. |
| ಭಾಷಾ ಅಂಶಗಳು | : | ವಚನಗಳ ಭಾಷಾ ಪ್ರಯೋಗದ ವೈಶಿಷ್ಟ್ಯಗಳನ್ನು ಕಂಡುಕೊಳ್ಳುವುದು. |
| ವ್ಯಾವಹಾರಿಕ ರೂಪ | : | ಕಿರು ಲೇಖನ, ಆಸ್ವಾದನ ಟಿಪ್ಪಣಿ, ಸಾರ ಸಂಗ್ರಹ ಲೇಖನ |
| ಮೌಲ್ಯ ಮನೋಭಾವಗಳು | : | ಪ್ರತಿಪಾದಿತವಾಗಿರುವ ವಚನಗಳ ಮೌಲ್ಯಗಳನ್ನು ತಿಳಿಯುವುದು, ವಚನವನ್ನು ಹಾಡುವ ಮನೋಭಾವ ಗುರುತಿಸುವುದು, ಸಾಮಾಜಿಕ ನೀತಿಯನ್ನು ತಿಳಿಯುವ ಮನೋಭಾವ, ಕರ್ತವ್ಯ ನಿಷ್ಠೆಯನ್ನು ಪಾಲಿಸುವ ಮನೋಭಾವಗಳನ್ನು ಬೆಳೆಸುವುದು. |
| ಕಲಿಕಾ ಸಾಮಗ್ರಿ | : | ಪಠ್ಯ ಪುಸ್ತಕ, ಅಡಕ ಮುದ್ರಿಕೆ, ಪರಾಮರ್ಶನ ಗ್ರಂಥ. |

| ಪ್ರಕ್ರಿಯೆ ಚಟುವಟಿಕೆ | ಮೌಲ್ಯಮಾಪನ |
|---|---|
| • ಪೂರ್ವಜ್ಞಾನದ ಅವಲೋಕನ ನಡೆಸುವುದು.<br>• ಜೇಡರ ದಾಸಿಮಯ್ಯನ ಪರಿಚಯ ನೀಡುವುದು. | |
| • ಕೆಲವು ವಚನಗಳನ್ನು ಓದಿಸುವುದು / ಹಾಡಿಸುವುದು.<br>• ಅಧ್ಯಾಪಕರು ವಚನಗಳನ್ನು ಹಾಡುವುದು. | ವಿದ್ಯಾರ್ಥಿಗಳ ಭಾಷಾ ಶುದ್ಧಿಯ ಕಡೆಗೆ ಲಕ್ಷ್ಯವಹಿಸುವುದು. |
| • ಅಡಕ ಮುದ್ರಿಕೆಯನ್ನು ಕೇಳಿಸುವುದು | ವಚನಗಳನ್ನು ಹಾಡುವ ರೀತಿಯನ್ನು ತಿಳಿಯುವುದು. |
| • ವಚನಗಳಲ್ಲಿ ಬಂದಿರುವ ಗಾದೆಮಾತುಗಳು ನಾಣ್ನುಡಿಗಳು, ಒಗಟುಗಳನ್ನು ಪಟ್ಟಿಮಾಡಿಸುವುದು. | |
| • ಪದವಿಂಗಡಣೆ, ಪದಗಳ ಅರ್ಥ, ಸಂಧಿ, ಸಮಾಸ ಪದ..... ಇತ್ಯಾದಿಗಳನ್ನು ಪಟ್ಟಿ ಮಾಡಿಸುವುದು.<br>• ವಚನ ಕಮ್ಮಟವನ್ನೇರ್ಪಡಿಸುವುದು. | ಬರೆದಿರುವ ವಿಷಯಗಳ ಸರಿ–ತಪ್ಪುಗಳನ್ನು ಖಚಿತಪಡಿಸಿಕೊಳ್ಳುವುದು. (ಪದಗಳ ಅರ್ಥ, ಸಂಧಿ, ಸಮಾಸ ಪದ..... ಇತ್ಯಾದಿ) |
| • ವಿವಿಧ ವಚನಕಾರರ ವಚನಗಳನ್ನು ನೀಡಿ ತುಲನಾತ್ಮಕ ಅಧ್ಯಯನಕ್ಕೆ ಆಸ್ಪದ ನೀಡುವುದು. | ವಿದ್ಯಾರ್ಥಿಗಳ ಕ್ರಿಯಾತ್ಮಕ ಪಾಲ್ಗೊಳ್ಳುವಿಕೆ ಯನ್ನು ಗಮನಿಸುವುದು.<br>ಗುಂಪಿನ ಚಟುವಟಿಕೆಯನ್ನು ನಿರೀಕ್ಷಿಸುವುದು. |
| • ಗ್ರಂಥಾಲಯದ ಉಪಯೋಗವನ್ನು ಪಡೆದು, ವಚನಗಳ ಹುಟ್ಟು, ಬೆಳವಣಿಗೆ, ಸಾಹಿತ್ಯದಲ್ಲಿ ವಚನಗಳ ಸ್ಥಾನಮಾನ... ಇತ್ಯಾದಿಗಳನ್ನು ಕುರಿತು ಬರೆಯಿಸುವುದು. | ಗ್ರಂಥಾಲಯದ ಸದುಪಯೋಗವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. |
| • ವಚನಗಳ ಆಶಯವನ್ನು ವಿದ್ಯಾರ್ಥಿಗಳಿಂದ ಬರೆಯಿಸುವುದು. | ಆಶಯದ ಸ್ಪಷ್ಟವಾದ ಗ್ರಹಿಕೆಯನ್ನು ಗುರುತಿಸುವುದು. |

ಪ್ರಾಂಶುಪಾಲರ ಸಹಿ. ಅಧ್ಯಾಪಕರ ಸಹಿ

## ಪ್ರತಿಫಲನ (Reflection)

- **ನಾನು ಗುರುತಿಸಿಕೊಂಡುದು, ತಿದ್ದುಪಡಿಮಾಡಿಕೊಳ್ಳಬೇಕಾದುದು**

•

•

•

•

- **ಮುಂದುವರಿದ ಚಟುವಟಿಕೆಗಳು ಹಾಗೂ ಪರಿಹಾರೋಪಾಯಗಳು**

•

•

•

•

•

- **ಪ್ರತಿಫಲನಾತ್ಮಕ ಟಿಪ್ಪಣಿಯ ಅಗತ್ಯವೇನು?**

• ಪ್ರತಿವಾರದ SRG ಸಬ್ಜೆಕ್ಟ್ ಕೌನ್ಸಿಲ್‌ನಲ್ಲಿ ಮಂಡಿಸುವುದಕ್ಕೆ

• ಮುಂದಿನ ಯೋಜನೆಗೆ ದಿಕ್ಸೂಚಿಯಾಗುವುದಕ್ಕೆ

• ಪ್ರತಿಹಂತದ (Term) ಮುಂದುವರಿದ ಮೌಲ್ಯಮಾಪನಗಳ ಕ್ರೋಢೀಕರಣಕ್ಕೆ.

# ಅಳಿಮನದವನ ಭಕ್ತಿ

**ಪ್ರವೇಶ**

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಅರಿಯುವುದಕ್ಕಾಗಿ ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು. ವಿದ್ಯಾರ್ಥಿಗಳು ಕೆಲವು ವಚನಕಾರರನ್ನು ಹೆಸರಿಸುವರು, ಕೆಲವು ವಚನಗಳನ್ನು ಹಾಡುವರು. ವಿದ್ಯಾರ್ಥಿಗಳ ಪ್ರತಿಕ್ರಿಯೆಗೆ ಅವರನ್ನು ಪ್ರೋತ್ಸಾಹಿಸುವುದು.

ಅಧ್ಯಾಪಕರು ಘಟಕ ಹಾಗೂ ಪಾಠದ ಉದ್ದೇಶದ ಕುರಿತು ವಿವರಿಸುವುದು.

10ನೇ ಶತಮಾನದಲ್ಲಿ ರಚಿತವಾದ ಕಾವ್ಯ ಪರಂಪರೆಯಲ್ಲಿ ಜೈನಮತ ತತ್ವಗಳ ಪ್ರತಿಪಾದನೆ ವಿಶೇಷವಾಗಿತ್ತು. ಆ ಕಾಲದಲ್ಲಿ ಕಾವ್ಯ ರಚನೆಯು ರಾಜರ ಆಸ್ಥಾನಕ್ಕೆ ಸೀಮಿತವಾಗಿತ್ತು. ಇದರಿಂದ ಭಿನ್ನವಾಗಿ ಹನ್ನೆರಡನೆ ಶತಮಾನದಲ್ಲಿ  ಮೇಲು ಕೀಳು ಎನ್ನುವ ವಿವಿಧ ಸ್ತರದಲ್ಲಿದ್ದವರು, ವಿವಿಧ ಕಾಯಕದಲ್ಲಿ ನಿರತರಾದವರು ಶಿವಶರಣರಾಗಿ ವಚನಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಾತ್ರವಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು ಕೂಡಾ ಶಿವಶರಣೆಯರಾಗಿ ಈ ಕ್ಷೇತ್ರಕ್ಕೆ ಕಾಲಿರಿಸಿದರು ಎಂಬುದು ಗಮನಿಸಬೇಕಾದ ಅಂಶವಾಗಿದೆ ಎಂದು ಮನವರಿಕೆ ಮಾಡಿಸುತ್ತಾ ವಿದ್ಯಾರ್ಥಿಗಳಿಗೆ ಪ್ರಸ್ತುತ ವಚನಗಳನ್ನು ಬರೆದ ವಚನಕಾರರ ಪರಿಚಯ ನೀಡುವುದು.

ಆದ್ಯ ವಚನಕಾರರೆಂದು ಗುರುತಿಸಲಾದ ದೇವರದಾಸಿಮಯ್ಯನನ್ನು ಕುರಿತು ಕೆಲವು ಅಂಶಗಳನ್ನು ವಿದ್ಯಾರ್ಥಿಗಳ ಅರಿವಿಗಾಗಿ ನೀಡುವುದು.

ಜೇಡರ ದಾಸಿಮಯ್ಯನೂ ಹನ್ನೊಂದನೇ ಶತಮಾನದ ಮಧ್ಯಭಾಗದಲ್ಲಿ ಕನ್ನಡ ನಾಡಿನಲ್ಲಿ ಬದುಕಿದ್ದನು. ವೀರಶೈವ ಧರ್ಮದ ತತ್ವಾದರ್ಶಗಳನ್ನು ಬಿಂಬಿಸುವುದರ ಮೂಲಕ ಪ್ರಸಿದ್ಧಿ ಪಡೆದನು. ಈತನು ಒಬ್ಬ ಹಿರಿಯ ಶಿವಶರಣನಾಗಿದ್ದನು.ವಚನ  ಒಂದು ಸಾಹಿತ್ಯ ಪ್ರಕಾರವಾಗಿ ರೂಪುಪಡೆದುದು ಈತನಿಂದಲೇ ಎಂಬುದು ವಿಮರ್ಶಕರ ಅಭಿಪ್ರಾಯ. ಸೂಳ್ನುಡಿಗಳ ಮಹತ್ವವನ್ನು ಸಾರಿದಂತೆಯೇ ಭಗವಂತನ ಸ್ವರೂಪ ಮಹಿಮೆ, ಗುರುವಿನ ಮಹಿಮೆ, ಭಕ್ತರ ಮಹಿಮೆ, ಬಾಹ್ಯಾಡಂಬರಗಳ ಖಂಡನೆ, ಸಾಮಾಜಿಕ ನೀತಿ ಮುಂತಾದುವನ್ನು ವಚನಗಳ ಮೂಲಕ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಅಧ್ಯಾಪಕರು ನೀಡಿದ ವಿವರಗಳನ್ನು ವಿದ್ಯಾರ್ಥಿಗಳು ತಮ್ಮ ಆಕ್ಟಿವಿಟಿ ಲೋಗ್ (Activity log) ನಲ್ಲಿ ಬರೆಯುವುದು.

ಅಧ್ಯಾಪಕರು ವಿದ್ಯಾರ್ಥಿಗಳಿಂದ ಪ್ರಸ್ತುತ ವಚನಗಳನ್ನು ಓದಿಸುವುದು, ಹಾಡಿಸುವುದು. ಅಲ್ಲಿ ಕಂಡುಬರುವ ತಪ್ಪುಗಳನ್ನು ಗುರುತಿಸಿ ತಿದ್ದಿಕೊಳ್ಳಲು ಸೂಚಿಸುವುದು. ವಚನವನ್ನು ಹಾಡುವ ರೀತಿಯನ್ನು ತಿಳಿಯಲು ಡಿ.ವಿ.ಡಿ.ಯನ್ನು ಬಳಸುವುದು.

ಅನಂತರ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿಸಿ ವಿಭಜಿಸಿ ಪ್ರತಿ ಗುಂಪಿಗೂ ಒಂದೊಂದು ಚಟುವಟಿಕೆಯನ್ನು ನೀಡುವುದು. (ಸಾರ ಸಂಗ್ರಹ, ಪದವಿಂಗಡಣೆ, ಪದಗಳ ಅರ್ಥ, ಸಂಸ್ಕೃತ–ತದ್ಭವ ಆಸ್ವಾದನಾ ಟಿಪ್ಪಣಿ.... ಇತ್ಯಾದಿಗಳು ಒಳಗೊಂಡಿರುವುದು ಒಳ್ಳೆಯದು.)

ಆಯಾ ಗುಂಪಿನವರು ಚರ್ಚೆ ನಡೆಸಿ ತಮಗೆ ನೀಡಿದ ಚಟುವಟಿಕೆಯನ್ನು ಪೂರೈಸಿ, ಗುಂಪಿನಿಂದ ಒಬ್ಬರು ಮಂಡಿಸುವರು. ಈ ಸಂದರ್ಭದಲ್ಲಿ ಪ್ರತಿಗುಂಪಿನವರು ತಮ್ಮ ಅಭಿಪ್ರಾಯಗಳನ್ನು ತಿಳಿಸುವರು. ಎಲ್ಲರ ಅಭಿಪ್ರಾಯಗಳನ್ನು ಅಧ್ಯಾಪಕರು ಕ್ರೋಡೀಕರಿಸಿ ಬಾಯ್ದೆರೆಯಾಗಿ ಹೇಳುವರು / ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳು ತಮ್ಮ activity log ನಲ್ಲಿ ನಮೂದಿಸುವರು. ಅಧ್ಯಾಪಕರು ಕೆಲವು ಪದಗಳನ್ನು ಈ ಕೆಳಗಿನಂತೆ ವಿಂಗಡಿಸಿ ಕರಿಹಲಗೆಯಲ್ಲಿ ಬರೆಯುವುದು.

ಪದ ವಿಂಗಡಣೆ :

| | | | | |
|---|---|---|---|---|
| ಎಡರು | + | ಅಡಸಿದಲ್ಲಿ | = | ಎಡರಡಸಿದಲ್ಲಿ |
| ತೊಡು | + | ಎಂಬರು | = | ತೊಡೆಂಬರು |
| ಕಡೆಯಾಗಲು | + | ಒಡನೆ | = | ಕಡೆಯಾಗಲೊಡನೆ |
| ಸುಂಕಕೆ | + | ಅಂಜಿ | = | ಸಂಕಕಂಜಿ |
| ಕರಿಯನು | + | ಇತ್ತಡೆ | = | ಕರಿಯನಿತ್ತಡೆ |
| ರಾಜ್ಯವನು | + | ಇತ್ತಡೆ | = | ರಾಜ್ಯವನಿತ್ತಡೆ |
| ಬಂಡಿಗೆ | + | ಆಧಾರ | = | ಬಂಡಿಗಾಧಾರ |
| ನೀಡುವರು | + | ಅಯ್ಯ | = | ನೀಡುವರಯ್ಯ |
| ಕಡುದರ್ಪ | + | ಏರಿದ | = | ಕಡುದರ್ಪವೇರಿದ |
| ಪೈರು | + | ಐದದಿರೆ | = | ಪೈಯಿರೈದದಿರೆ |

**ಪರ್ಯಾಯ ಪದ**

ವಚನಗಳಲ್ಲಿ ಮೃಡ ಎಂಬ ಶಿವನ ಪರ್ಯಾಯ ನಾಮವು ಪ್ರಯೋಗವಾಗಿದೆ. ಶಿವನ ಇತರ ಪರ್ಯಾಯ ನಾಮಗಳನ್ನು ಪಟ್ಟಿಮಾಡಿಸುವುದು.

ಉದಾ: ಶಿವ – ಈಶ್ವರ, ವಿರೂಪಾಕ್ಷ, ತ್ರಿನೇತ್ರ, ಪಾಲಾಕ್ಷ, ಫಣಾಕ್ಷ – ಮಹಾಲಿಂಗೇಶ್ವರ, ಮಲ್ಲಿಕಾರ್ಜುನ, ಸದಾಶಿವ, ಮಹಾಬಲೇಶ್ವರ ಇನ್ನೂ ಅನೇಕ ಪದಗಳನ್ನು ಆರಿಸಿ ಅವುಗಳಿಗೆ ಪರ್ಯಾಯ ಪದಗಳನ್ನು ಬರೆಯಿಸುವುದು.

ಸಂಸ್ಕೃತ–ತದ್ಭವಗಳನ್ನು ಗುರುತಿಸುವುದು.

ಶ್ರೀ – ಸಿರಿ

ಭಕ್ತಿ – ಬಕುತಿ....... ಇದೇ ರೀತಿಯಲ್ಲಿ ಇತರ ಸಂಸ್ಕೃತ ತದ್ಭವ ಪದಗಳನ್ನು ಪಟ್ಟಿಮಾಡಲು ಸೂಚಿಸುವುದು.

### ಆಸ್ವಾದನ ಟಿಪ್ಪಣಿ

ಪ್ರಸ್ತುತ ಪಾಠಭಾಗದಲ್ಲಿ ಬಂದಿರುವ ವಚನಗಳು ಆಶಯವನ್ನು ಪ್ರತ್ಯೇಕ ಪ್ರತ್ಯೇಕ ಅಳವಡಿಸಿಕೊಂಡು ಆಸ್ವಾದನ ಟಿಪ್ಪಣಿ ಬರೆಸುವುದು.

ವಿದ್ಯಾರ್ಥಿಗಳು ಬರೆದ ಆಸ್ವಾದನ ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಿ, ಚರ್ಚೆಯ ಮೂಲಕ ಅಭಿಪ್ರಾಯಗಳನ್ನು ಅಧ್ಯಾಪಕರ ಸಹಾಯದಿಂದ ಕ್ರೋಡೀಕರಿಸಿ ಬರೆಯುವುದು.

## ವ್ಯಂಗ್ಯ ನುಡಿ

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ ಇರುಳೆಲ್ಲಾ ನಡೆದನಾ ಸುಂಕಕಂಜಿ.....

ಕಳವೆಯೆಲ್ಲ ಹೋಗಿ ಬರಿಗೋಣಿ ಉಳಿಯಿತ್ತು...

ಇಲ್ಲಿ ವಚನದಲ್ಲಿ ಅಡಗಿದ ವ್ಯಂಗ್ಯವನ್ನು ಗುರುತಿಸುವುದು.

ಫಲಾಪೇಕ್ಷೆಯಿಂದ ಮಾಡುವ ಭಕ್ತಿ ನಿರರ್ಥಕ ಎಂಬುದನ್ನು ಹರಿದ ಗೋಣಿ ಖಾಲಿಯಾಯಿತು ಎಂಬ ಮಾತಿನಲ್ಲಿ ಸೂಚಿಸಿದ್ದಾರೆ. ಈ ತೆರನಾದ ವ್ಯಂಗ್ಯ ಪದಪ್ರಯೋಗವನ್ನು ಇತರ ವಚನಗಳಲ್ಲಿ ಗುರುತಿಸಲು ಸೂಚಿಸುವುದು.

## ಸ್ವಾರಸ್ಯ ಬರಹ

‘ಕಡೆಗೀಲು ಬಂಡಿಗಾಧಾರ’– ಎಂಬ ಮಾತಿನ ಸ್ವಾರಸ್ಯವನ್ನು ತಿಳಿಸಲು ಹೇಳುವುದು.

### ಪದಗಳ ಅರ್ಥ

ವಿಪತ್ತು = ಆಪತ್ತು

ಸುಂಕ = ತೆರಿಗೆ

ಒಲ್ಲೆ = ಒಪ್ಪಲಾರೆ

ಕಡುದರ್ಪ = ಅತಿಯಾದ ಅಹಂಕಾರ

## ಸಾರಾಂಶ

ಮನುಷ್ಯನು ಸಂಕಟ ಬಂದಾಗ ದೇವರನ್ನು ಭಕ್ತಿಯಿಂದ ನೆನೆಯುತ್ತಾನೆ. ಅದೇ ಕಷ್ಟದಿಂದ ಬಿಡುಗಡೆ ಹೊಂದಿದಾಗ ಅವನು ದೇವರನ್ನು ಮರೆತು ಬಿಡುತ್ತಾನೆ. ಆಗ ಒಂದು ವೇಳೆ ಪರಮಾತ್ಮನು ಎದುರಿನಲ್ಲಿ ಬಂದರೂ ಕಾಣಲಾರನು. ಇದು ಸಾಮಾನ್ಯ ಮನುಷ್ಯನ ಸಹಜಗುಣವಾಗಿದೆ.

ಹರಿದ ಗೋಣಿಯಲ್ಲಿ ಧಾನ್ಯವನ್ನು ತುಂಬಿಕೊಂಡು ಒಬ್ಬ ವ್ಯಕ್ತಿಯು ಸುಂಕವನ್ನು ತಪ್ಪಿಸುವುದಕ್ಕಾಗಿ ರಾತ್ರಿ ಪೂರ್ತಿ ಬಳಸುದಾರಿಯಲ್ಲಿ ಸಾಗುತ್ತಾನೆ. ಹೀಗೆ ನಡೆಯಲು ಧಾನ್ಯವೆಲ್ಲಾ ಬಿದ್ದುಹೋಗಿ ಕೊನೆಗೆ ಬರಿಗೋಣಿ ಮಾತ್ರ ಉಳಿಯುತ್ತದೆ. ಹಾಗೆಯೇ ಶುದ್ಧ ಮನಸ್ಸಿಲ್ಲದವನ ಭಕ್ತಿಯೂ ನಿರರ್ಥಕವಾಗುತ್ತದೆ.

ಭಕ್ತನಾದವನು ಆನೆಗಾಗಿ, ಸಂಪತ್ತಿಗಾಗಿ, ರಾಜ್ಯದ ಅಧಿಕಾರಕ್ಕಾಗಿ ಆಸೆ ಪಡುವುದಿಲ್ಲ. ಅವು ಅನಾಯಾಸವಾಗಿ ದೊರೆತರೂ ಸ್ವೀಕರಿಸಲಾರ. ಆದರೆ ಶರಣರ ಒಳ್ಳೆಯ ಮಾತುಗಳನ್ನು ಒಂದು ಅರ್ಧ ಗಳಿಗೆ ಕೂಡಾ ಬಿಟ್ಟು ಬಿಡಲಾರ. ಶರಣರ ಒಳ್ಳೆಯ ಮಾತುಗಳನ್ನು ಅವಗಣಿಸುವುದೆಂದರೆ ಆತನ ಪಾಲಿಗೆ ತನ್ನ ಇಷ್ಟದೈವವನ್ನೇ ತ್ಯಜಿಸುವಂತಾಗುತ್ತದೆ.

ಕಡೆಗೀಲು ಬಂಡಿಗೆ ಆಧಾರವಾಗಿದೆ. ಇದು ಇಲ್ಲದೇ ಇದ್ದರೆ ಬಂಡಿಯು ಮಗುಚಿ ಬೀಳದಿರಲಾರದು. ಹಾಗೆಯೇ ಅತಿಯಾದ ಅಹಂಕಾರ ತುಂಬಿದ ಶರೀರವೆಂಬ ಬಂಡಿಗೆ ಶಿವಶರಣರ ಒಳ್ಳೆಯ ಮಾತುಗಳೆ ಕಡೆಗೀಲಾಗಿರುತ್ತವೆ. ಈ ಮಾತುಗಳಿಲ್ಲದಿದ್ದರೆ ಮನುಷ್ಯನ ಬಾಳ್ವೆ ದುಃಖಮಯವಾಗುತ್ತದೆ.

ನೀರಿನ ಒಸರನ್ನು ಕಂಡಾಗ ಕೆಲವರು ಬಾವಿಯನ್ನು ತೋಡುವಂತೆ ಹೇಳುತ್ತಾರೆ. ಅರವಟ್ಟಿಗೆ, ಛತ್ರ ಇತ್ಯಾದಿಗಳು ತಂತಮ್ಮದು ಎನ್ನುತ್ತಾರೆ. ಆದರೆ ಪೈರು ಬೆಳೆಯದಿದ್ದರೆ ಸಕಾಲದಲ್ಲಿ ಮಳೆ ಸುರಿಯದಿದ್ದರೆ ಅವರು ಹೇಗೆ ತಾನೇ ನೀರು, ಆಹಾರ ಇತ್ಯಾದಿ ಒದಗಿಸುವರು. ಪ್ರತಿಯೊಂದು ದೇವರ ಅನುಗ್ರಹದಿಂದಲೇ ನಡೆಯುತ್ತದೆ.

# ದಯೆಯೇ ಧರ್ಮದ ಮೂಲವಯ್ಯ

## ಪ್ರವೇಶ

ಪಾಠ ಪ್ರವೇಶದ ದೃಷ್ಟಿಯಿಂದ ವಿದ್ಯಾರ್ಥಿಗಳ ಪೂರ್ವಜ್ಞಾನ ತಿಳಿಯಲು ಕೆಳಗೆ ನೀಡಿದಂತೆ ಕೆಲವು ಪ್ರಶ್ನೆಗಳನ್ನು ಕೇಳಬಹುದು. ಹಿಂದಿನ ತರಗತಿಗಳಲ್ಲಿ ನೀವು ಓದಿದ/ಕೇಳಿದ ಬಸವಣ್ಣನವರ ವಚನಗಳನ್ನು ಹೇಳಿರಿ. ಬಸವಣ್ಣನ ವಚನಗಳ ಅಂಕಿತ ನಾಮ ಯಾವುದು? ವಿದ್ಯಾರ್ಥಿಗಳು ಉತ್ತರಿಸುತ್ತಾರೆ. ಅನಂತರ ಈ ವಚನಗಳನ್ನು ಬರೆದ ಬಸವಣ್ಣನವರ ಹೆಚ್ಚಿನ ಪರಿಚಯವನ್ನು ಮಾಡಿಸುವುದು.

## ಕವಿ ಪರಿಚಯ

ವಚನ ಸಾಹಿತ್ಯ ಕ್ಷೇತ್ರದಲ್ಲಿ ಅನನ್ಯ ಸಾಧನೆಯನ್ನು ಮಾಡಿದ ಬಸವಣ್ಣನವರು 'ಭಕ್ತಿ ಭಂಡಾರಿ'ಯೆಂದೇ ಪ್ರಸಿದ್ಧರಾದವರು. ಇವರು ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಹೊಂದಿದವರು. ಒಂದು ಸ್ವತಂತ್ರ ಧರ್ಮದ ರೂವಾರಿಯಾಗಿ ಹೊಸ ಸಮಾಜದ ನಿರ್ಮಾಪಕರಾಗಿ, ಮಾನವ ಕುಲದ ಕಲ್ಯಾಣಕ್ಕಾಗಿ ಅವಿರತ ಹೋರಾಟ ಮಾಡಿದ ಮಹಾನ್ ಚೇತನವಾಗಿದ್ದರು. ಇವರು ಒಬ್ಬ ಸ್ವತಂತ್ರ ವಿಚಾರವಾದಿ, ಮಾನವತಾವಾದಿ, ಸಮಾಜವಾದಿ, ಅರ್ಥಶಾಸ್ತ್ರಜ್ಞ, ಪ್ರಗತಿಪರ ಧೋರಣೆಯ ಕ್ರಾಂತಿಕಾರಿ, ನುಡಿದಂತೆ ನಡೆದ ಪ್ರಾಮಾಣಿಕ ವ್ಯಕ್ತಿಯಾಗಿ ಬಾಳಿದವರು. 'ಕಾಯಕವೇ ಕೈಲಾಸ' ಎಂಬಂತೆ ಸತ್ಯ, ಶುದ್ಧ ಕಾಯಕದಿಂದ ದೈವತ್ವ ಪ್ರಾಪ್ತವಾಗುತ್ತದೆ ಎಂಬ ಆದರ್ಶವನ್ನು ಪ್ರತಿಪಾದಿಸಿದವರು. ನಮ್ಮ ಜೀವನದಲ್ಲಿ ಮಾತಿಗಿರುವ ಮಹತ್ವ, 'ದಯೆಯೇ ಧರ್ಮದ ಮೂಲ' ಎಂಬ ಸನಾತನ ತತ್ವ, ಆತ್ಮಶೋಧನೆ ಹಾಗೂ ಸಮಾಜ ವಿಮರ್ಶೆ ಮುಂತಾದ ವಿಚಾರಗಳನ್ನು ಇವನ ವಚನಗಳು ಪ್ರತಿಪಾದಿಸುತ್ತವೆ.

ವಿದ್ಯಾರ್ಥಿಗಳು ವಚನ ಭಾಗವನ್ನು ಹಾಡುವರು. ವಿದ್ಯಾರ್ಥಿಗಳ ಓದುವಿಕೆಯನ್ನು / ಹಾಡುವಿಕೆಯನ್ನು ಅಧ್ಯಾಪಕರು ಗಮನಿಸಿ, ತಪ್ಪಿದ್ದಲ್ಲಿ ಮಾರ್ಗದರ್ಶನ ನೀಡಿ ಸರಿಪಡಿಸುವುದು. ಅನಂತರ ಅಡಕ ಮುದ್ರಿಕೆ (DVD) ಯ ಸಹಾಯದಿಂದ ವಚನಗಳನ್ನು ಹೇಗೆ ರಾಗಬದ್ಧವಾಗಿ ಹಾಡಬಹುದೆಂಬುದಾಗಿ ಕೆಲವು ಮಾದರಿಗಳನ್ನು ತಿಳಿಸುವುದು. ಪಾಠದ ಮುಂದುವರಿಕೆಯ ಭಾಗವಾಗಿ ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳನ್ನಾಗಿ ವಿಂಗಡಿಸಿ, ಬೇರೆ ಬೇರೆ ಚಟುವಟಿಕೆಗಳನ್ನು ನೀಡುವುದು. ಒಂದನೆಯ ಗುಂಪು ವಚನ ಭಾಗದಲ್ಲಿ ಪ್ರಯೋಗವಾಗಿರುವ ಕೆಲವು ಕಠಿಣ ಪದಗಳನ್ನು ವಿಂಗಡಿಸಿ ಬರೆಯುವರು. ಹೀಗೆ ವಿಂಗಡಿಸಿದ ಪದಗಳನ್ನು ತಂಡದ ನಾಯಕ ತರಗತಿಯಲ್ಲಿ ಮಂಡಿಸುತ್ತಾನೆ. ಇದನ್ನು ಅಧ್ಯಾಪಕರು ಗಮನಿಸಿ, ಲೋಪಗಳಿದ್ದರೆ ಸೂಕ್ತ ಮಾರ್ಗದರ್ಶನ ನೀಡಿ ಪದಗಳನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಲು ನೆರವಾಗುವುದು. ಕೆಳಗಿನಂತೆ ಪದಗಳ ವಿಂಗಡಣೆಯನ್ನು ಮಾದರಿಯಾಗಿ ನೀಡುವುದು.

## ಪದವಿಂಗಡಣೆ

| | | |
|---|---|---|
| ದೀಪ್ತಿಯಂತಿರಬೇಕು | = | ದೀಪ್ತಿಯಂತೆ + ಇರಬೇಕು |
| ಅಹುದಹುದೆನಬೇಕು | = | ಅಹುದು + ಅಹುದು + ಎನಬೇಕು |
| ಸಂಗಮದೇವನೆಂತೊಲಿವನಯ್ಯಾ | = | ಸಂಗಮದೇವನು + ಎಂತು + ಒಲಿವನು + ಅಯ್ಯಾ |

| | | |
|---|---|---|
| ಸಂಗಯ್ಯನಂತಲ್ಲದೊಲ್ಲನಯ್ಯಾ | = | ಸಂಗಯ್ಯನು + ಅಂತು + ಅಲ್ಲದೆ + ಒಲ್ಲನಯ್ಯ |
| ಎನ್ನವರೊಲಿದು | = | ಎನ್ನವರು + ಒಲಿದು |
| ಮಸೆದಲಗಾಗಿ | = | ಮಸೆದ + ಅಲಗು + ಆಗಿ |
| ನೀನೆನಗೊಳ್ಳಿದನಾದರೆ | = | ನೀನು + ಎನಗೆ + ಒಳ್ಳಿದನು + ಆದರೆ |
| ಹೊಗಳತೆಗಡ್ಡ ಬಾರಾ | = | ಹೊಗಳತೆಗೆ + ಅಡ್ಡ ಬಾರಾ |
| ಎನ್ನ ನಿಮ್ಮೆಗೊಂಡಿತಲ್ಲಾ | = | ಎನ್ನನು + ಇಮ್ಮೈ+ ಕೊಂಡಿತಲ್ಲಾ |
| ಕುಳ್ಳಿರೆಂದಡೆ | = | ಕುಳ್ಳಿರು + ಎಂದಡೆ |
| ಗುಣವಿಲ್ಲದಿರ್ದಡೆ | = | ಗುಣ + ಇಲ್ಲದೆ + ಇರ್ದಡೆ |

## ಸಂಸ್ಕೃತ–ತದ್ಭವ

ತರಗತಿಯ ಇನ್ನೊಂದು ಗುಂಪು ವಚನ ಭಾಗದಲ್ಲಿ ಬರುವ ಸಂಸ್ಕೃತ–ತದ್ಭವ ಪದಗಳನ್ನು ಬರೆಯಲಿ.

ಉದಾ: ಧರ್ಮ (ಸಂ) > ದಮ್ಮ (ತ)

ಶಿರ (ಸಂ) > ಸಿರ (ತ)

ಗುಂಪು ಪ್ರಸ್ತುತಪಡಿಸಿದ ಸಂಸ್ಕೃತ ತದ್ಭವ ರೂಪಗಳು ಸರಿಯಾದ ರೂಪದಲ್ಲಿದೆಯೇ ಎಂದು ಅಧ್ಯಾಪಕರು ಗಮನಿಸುವುದು. ತಪ್ಪುಗಳಿದ್ದರೆ ಸರಿಯಾದ ರೂಪದಲ್ಲಿ ಬರೆಯಲು ಮಾರ್ಗದರ್ಶನ ನೀಡುವುದು.

## ಆಶಯ ಬರೆಯುವುದು

ವಚನ ಭಾಗದಲ್ಲಿ ಪ್ರಯೋಗವಾದ 'ದಯೆಯೇ ಧರ್ಮದ ಮೂಲ', 'ಮೂಗ ಕೊಯ್ಯ್ವದ ಮಾಬನೆ' – ಈ ರೀತಿಯ ನುಡಿಗಟ್ಟುಗಳ ಅರ್ಥವನ್ನು ಗುಂಪಿನಲ್ಲಿ ಚರ್ಚಿಸಿ, ಆಶಯವನ್ನು ತಿಳಿಯುವುದು. ಗುಂಪಿನಲ್ಲಿ ಚರ್ಚೆಯಾದ ಒಟ್ಟು ಆಶಯವನ್ನು ಒಬ್ಬರು ತರಗತಿಯಲ್ಲಿ ಮಂಡಿಸುವುದು. ವಾಕ್ಯದ ಅರ್ಥಕ್ಕೆ ಚ್ಯುತಿ ಬಂದಿದ್ದರೆ ಅಧ್ಯಾಪಕರು ಸರಿಪಡಿಸಲು ಮಾರ್ಗದರ್ಶನ ನೀಡುವುದು.

'ಮಾತು ಬೆಳ್ಳಿ, ಮೌನ ಬಂಗಾರ' ಈ ಸೂಕ್ತಿಯನ್ನು ವಿಸ್ತರಿಸಿ ಬರೆಯಲು ತಿಳಿಸುವುದು. ಸೂಕ್ತಿ ಪದಗಳನ್ನು ಇತರ ಪಾಠಭಾಗದಿಂದ ಆಯ್ದುಕೊಂಡು, ಅರ್ಥವನ್ನು ತಿಳಿದು, ಆಶಯವನ್ನು ಬರೆಯಲು ಹೇಳುವುದು.

ಅನಂತರ ಅಧ್ಯಾಪಕರು ತರಗತಿಯ ವಿದ್ಯಾರ್ಥಿಗಳ ವಿವಿಧ ಗುಂಪುಗಳಿಗೆ ವಚನ ಭಾಗದ ಆಶಯ ಬರೆಯಲು ತಿಳಿಸುವುದು. ಪ್ರತಿಯೊಂದು ಗುಂಪು ವಚನದ ಭಾಗದ ಆಶಯವನ್ನು ಚರ್ಚಿಸಿ, ಕ್ರೋಡೀಕರಿಸಿ ತರಗತಿಯಲ್ಲಿ ಮಂಡಿಸುವರು. ತಮ್ಮ Activity Log ಪುಸ್ತಕದಲ್ಲಿ ಬರೆಯುವುದು. ಆಶಯವನ್ನು ಹೊಂದಿಕೊಂಡು ವಿವಿಧ ಚಟುವಟಿಕೆಗಳನ್ನು ನೀಡುವುದು.

## ಚರ್ಚಾಗೋಷ್ಠಿ

- ಮನುಷ್ಯ ನುಡಿದಂತೆ ನಡೆದರೆ ಯಶಸ್ಸು ಪಡೆಯಲು ಸಾಧ್ಯವೇ? – ಚರ್ಚಿಸಿ, ಅಲ್ಲಿ ಮೂಡಿ ಬಂದ ವಿಚಾರಗಳನ್ನು ಕ್ರೋಡೀಕರಿಸಿ ಬರೆಯುವುದು.

- ಸಾಮಾನ್ಯ ಮನುಷ್ಯನಲ್ಲಿ ಇರಬೇಕಾದ ಗುಣ ನಡತೆಗಳು ಯಾವುವು? ಎಂಬುದರ ಬಗ್ಗೆ ವಿದ್ಯಾರ್ಥಿಗಳು ಅನಿಸಿಕೆಗಳನ್ನು ಹೇಳುವುದು. ಬಸವಣ್ಣನವರ ವಚನಗಳ ಆಶಯವನ್ನು ಗಮನದಲ್ಲಿಟ್ಟುಕೊಂಡು ಮೂಡಿ ಬಂದ ಒಟ್ಟು ಆಶಯವನ್ನು ವಿದ್ಯಾರ್ಥಿಗಳು ತಮ್ಮ ಪುಸ್ತಕದಲ್ಲಿ ಬರಹ ರೂಪದಲ್ಲಿ ದಾಖಲಿಸಲಿ.

### ಕಿರುಲೇಖನ

- ಸಮಾಜ ವಿಮರ್ಶೆಯ ಬಗ್ಗೆ ಬಸವಣ್ಣನ ನಿಲುವುಗಳೇನು? ಎಂಬುದನ್ನು ವಿದ್ಯಾರ್ಥಿಗಳು ಚರ್ಚಿಸುವುದು. ಚರ್ಚೆಯಲ್ಲಿನ ವಿಷಯಗಳನ್ನು ಕಿರುಲೇಖನ ರೂಪದಲ್ಲಿ ಬರೆಯುವುದು.

### ನೇಮಿತಕಾರ್ಯ

- ಬಸವಣ್ಣನವರ ಜೀವನ ಚರಿತ್ರೆಯನ್ನು ಗ್ರಂಥಾಲಯದ ಸಹಾಯದಿಂದ ಬರೆಯಿರಿ.

### ಸಾರಾಂಶ

ಪ್ರಸ್ತುತ ವಚನದಲ್ಲಿ ಮಾತಿನ ಮಹತ್ವದ ಬಗೆಗೆ ಬಸವಣ್ಣನವರು ಹೇಳುತ್ತಾರೆ. ಆಡಿದ ಮಾತು ಮುತ್ತಿನ ಹಾರದಂತೆ ಪರಿಶುದ್ಧವಾಗಿರಬೇಕು. ಮಾಣಿಕ್ಯದ ಕಾಂತಿಯಂತಿರಬೇಕು. ಸ್ಪಟಿಕದ ಸಲಾಕೆಯಂತೆ ಕಳಂಕ ರಹಿತವಾಗಿರಬೇಕು. ದೇವರು ಮೆಚ್ಚುವಂತೆ ಇರಬೇಕು. ಆಡಿದ ನುಡಿಯಂತೆ ಆಚರಣೆ ಇರಬೇಕು. ಹಾಗೆ ಇಲ್ಲವಾದರೆ ದೇವರು ಒಲಿಯಲಾರನು.

ಎಲ್ಲ ಧರ್ಮಗಳು ದಯೆಯನ್ನೇ ಬೋಧಿಸುತ್ತವೆ. ಜಗತ್ತಿನ ಎಲ್ಲಾ ಪ್ರಾಣಿಗಳಲ್ಲಿಯೂ ದಯೆಯನ್ನು ತೋರಿಸಬೇಕು. ಏಕೆಂದರೆ ದಯೆಯೇ ಧರ್ಮದ ಅಡಿಗಲ್ಲಾಗಿದೆ. ದಯಾ ಗುಣವಿಲ್ಲದವನಿಗೆ ದೇವರು ಒಲಿಯಲಾರನು.

ಈ ವಚನದಲ್ಲಿ ಹೊಗಳಿಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಹೇಳಲಾಗಿದೆ. ನಮ್ಮವರ ಹೊಗಳಿಕೆ ನನ್ನನ್ನು ಹೊನ್ನ ಶೂಲಕ್ಕೇರಿಸಿದಂತಾಗಿದೆ. ಆ ಶೂಲ ನನ್ನ ದೇಹವನ್ನು ತಿವಿದು ನೋಯಿಸುತ್ತಿದೆ. ಹೊಗಳಿಕೆಯು ಮಸೆದ ಅಲಗಿನಂತೆ ತಾಗಿದೆ. ಇದರಿಂದ ನಾನು ನೊಂದೆನು ಇನ್ನು ಸಹಿಸಲಾರೆನು ದೇವಾ, ನೀನು ನನಗೆ ಒಳಿತನ್ನು ಮಾಡುವುದಾದರೆ ಈ ರೀತಿಯ ಹೊಗಳುವಿಕೆಯನ್ನು ತಡೆದು ಬಿಡು ಎಂದು ಬಸವಣ್ಣನು ಇಷ್ಟ ದೈವವನ್ನು ಮೊರೆ ಹೋಗುತ್ತಾನೆ.

ಮನೆಗೆ ಬಂದಿರುವ ಅತಿಥಿಗಳನ್ನು ಸತ್ಕರಿಸಬೇಕಾದ ಅಗತ್ಯದ ಬಗ್ಗೆ ಹೇಳಿದ ವಚನವಾಗಿದೆ. ನಮ್ಮ ಮನೆಗೆ ಅತಿಥಿಯೊಬ್ಬರು ಬಂದಾಗ ಏನು ಬಂದಿರಿ? ಕ್ಷೇಮವೇ ಎಂದು ವಿಚಾರಿಸಿದರೆ ನಿಮ್ಮ ಸಂಪತ್ತು ನಾಶವಾಗಲಾರದು, ಕುಳಿತುಕೊಳ್ಳಿ ಎಂದರೆ ನೆಲ ಗುಳಿ ಬೀಳಲಾರದು. ಅವರ ಜೊತೆಗಿದ್ದುಕೊಂಡು ಮಾತನಾಡಿದರೆ ನಿಮ್ಮ ತಲೆ, ಹೊಟ್ಟೆ ಒಡೆದು ಹೋಗದು, ಕೊಡಲು ಏನೂ ಇಲ್ಲದ ಬಡವನಾದರೂ ಅಡ್ಡಿಯಿಲ್ಲ ಆತ ಒಳ್ಳೆಯ ಗುಣವನ್ನು ಹೊಂದಿರಬೇಕು. ಅಂತಹ ಒಳ್ಳೆಯ ನಡವಳಿಕೆ ಇಲ್ಲದಿದ್ದರೆ ದೇವರು ದಂಡಿಸದೆ ಇರಲಾರನು.

# ಚಂದನದ ಕಂಪು

## ಪ್ರವೇಶ

ವಚನ ಸಾಹಿತ್ಯದ ಬಗೆಗೆ ಈಗಾಗಲೇ ವಿದ್ಯಾರ್ಥಿಗಳು ತಿಳಿದುಕೊಂಡಿರುತ್ತಾರೆ. ಸರಳ ಸುಂದರ ಮಾತುಗಳ ಮೂಲಕ ನಿರೂಪಿಸಿ ಸಮಾಜ ಸುಧಾರಣೆಗೆ ಪ್ರಯತ್ನಿಸಿದವರು ವಚನಕಾರರು. ಅಕ್ಕಮಹಾದೇವಿಯು ಸಮಾಜದಲ್ಲಿ ಸ್ತ್ರೀ ಪುರುಷ ಸಮಾನತೆಯನ್ನು ಎತ್ತಿ ಹಿಡಿದ ದಿಟ್ಟ ಮಹಿಳೆ ಕೌಶಿಕನೆಂಬ ರಾಜನನ್ನು ಮದುವೆಯಾಗಿದ್ದರೂ ಲೌಕಿಕ ಜೀವನದಿಂದ ವಿಮುಖಳಾಗಿ ವೈರಾಗ್ಯ ಹೊಂದಿ ಈ ಲೋಕದ ಸುಖಗಳಿಗೆ ತಿಲಾಂಜಲಿಯನ್ನಿತ್ತು ತನ್ನ ಆರಾಧ್ಯದೈವವಾದ ಚೆನ್ನಮಲ್ಲಿಕಾರ್ಜುನನನ್ನೇ ಪತಿಯಾಗಿ ಸ್ವೀಕರಿಸಿ ಅವನನ್ನೇ ಹುಡುಕುತ್ತಾ ನಡೆದಳು. ಎಂತಹ ಪ್ರತಿಕೂಲ ಪರಿಸ್ಥಿತಿ ಎದುರಾದರೂ ದೃಢ ಭಕ್ತಿಯನ್ನು ಬಿಡಬಾರದು ಎಂಬುದು ಅವಳ ನಿಲುವು. ಸಮಾಜದಲ್ಲಿ ಸ್ತುತಿ-ನಿಂದನೆಗಳು ಸಾಮಾನ್ಯ. ಇವುಗಳನ್ನು ಸ್ವೀಕರಿಸುವ ಮನೋಭಾವ ಬೇಕು ಎಂಬುದು ಅವಳ ಆಶಯ.

ಅಕ್ಕಮಹಾದೇವಿ ಬರೆದ ವಚನಗಳನ್ನು ಅಡಕ ಮುದ್ರಿಕೆಯ ಸಹಾಯದಿಂದ ಕೇಳಿಸುವುದು. ಕೆಲವು ವಿದ್ಯಾರ್ಥಿಗಳಿಂದ ಹಾಡಿಸಬಹುದು.

**ಚಟುವಟಿಕೆ:**

ವಿದ್ಯಾರ್ಥಿಗಳನ್ನು ಗುಂಪಾಗಿಸಿ ಪ್ರತಿ ಗುಂಪಿಗೆ ಒಂದೊಂದು ಚಟುವಟಿಕೆಯನ್ನು ಕೊಡುವುದು. ಪದ ವಿಂಗಡಣೆ, ಪದಗಳ ಅರ್ಥ, ಆಸ್ವಾದನಾ ಟಿಪ್ಪಣಿ ಇತ್ಯಾದಿ ಚರ್ಚೆಯ ಬಳಿಕ ಮೂಡಿಬಂದ ಅಭಿಪ್ರಾಯಗಳನ್ನು ಅಧ್ಯಾಪಕರ ಸಹಾಯದಿಂದ ಯೋಗ್ಯ ತಿದ್ದುಪಡಿಗಳೊಂದಿಗೆ ವಿದ್ಯಾರ್ಥಿಗಳು ತಮ್ಮ ಲೋಗ್ ಬುಕ್ಕಿನಲ್ಲಿ ಬರೆದುಕೊಳ್ಳಲಿ.

ವಚನಗಳಲ್ಲಿ ಬಂದಿರುವ ಆಶಯಗಳನ್ನು ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಹೇಳಿಸುವುದು.

ನಮ್ಮ ಸಮಾಜದಲ್ಲಿ ಸಜ್ಜನರೂ ಇರುತ್ತಾರೆ. ಅಲ್ಲದವರೂ ಇರುತ್ತಾರೆ. ಸಜ್ಜನರಲ್ಲಿ ಎಂತಹ ಗುಣಗಳನ್ನು ನಾವು ನಿರೀಕ್ಷಿಸಬಹುದು ಎಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳ ಮುಂದಿಡಬಹುದು. ಅವರು ಕೊಡುವ ಉತ್ತರದ ಆಧಾರದಲ್ಲಿ ಅಕ್ಕ ಮಹಾದೇವಿ ಹೇಳಿದ ವಿಚಾರಗಳನ್ನು ಸೇರಿಸಿ ವಿಶ್ಲೇಷಿಸುವುದು. ಚಂದನ, ಸುವರ್ಣ, ಕಬ್ಬು ಮುಂತಾದವುಗಳು ನೋವನ್ನೋ, ಹಿಂಸೆಯನ್ನೋ ಅನುಭವಿಸಿ ಪರಿಮಳವನ್ನೂ, ಹೊಳಪನ್ನೂ, ಸವಿಯನ್ನು ಕೊಡುವುದಲ್ಲವೇ? ಹಾಗೆ ಉತ್ತಮರು ತಮ್ಮ ಜೀವನದಲ್ಲಿ ಎದುರಿಸಿದ ಕಷ್ಟಗಳಿಂದಲಾಗಿ ಕುಗ್ಗಿ, ಕುಸಿದು ಹೋಗಲಾರರು, ಧೈರ್ಯ, ಸ್ಥೈರ್ಯಗಳನ್ನು ಬೆಳೆಸಿ ಪರಿಪೂರ್ಣತೆಯತ್ತ ಸಾಗಬಹುದು.

ಭಕ್ತನಿಗೆ ಭಗವಂತನಲ್ಲಿ ಇರಬೇಕಾದ ನಿಷ್ಠೆಯ ಬಗ್ಗೆ ಅಕ್ಕಮಹಾದೇವಿ ಬಹಳ ಸುಂದರವಾಗಿ ಹೇಳಿದ್ದಾಳೆ. 'ಕೊಂದೊಡೆ ಶರಣೆಂಬುದ ಮಾಣೆ' ಎಂಬ ಅವಳ ಮಾತೇ ಇದಕ್ಕೆ ಸಾಕ್ಷಿ.

ಜನರು ತಮ್ಮ ತಮ್ಮ ಪರಿಸರ, ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳದೆ ಉಂಟಾಗುತ್ತಿರುವ ಅನಾಹುತಗಳನ್ನು ಎಲ್ಲರೂ ತಿಳಿದದ್ದೇ. ವಿದ್ಯಾರ್ಥಿಗಳಿಗೆ ಕೆಲವು ಮಾಹಿತಿಗಳು ಲಭ್ಯವಾಗಿರಬಹುದು. ವಾರ್ತಾಪತ್ರಿಕೆಗಳು ಮಾಧ್ಯಮಗಳು ಇಂತಹ ಅದೆಷ್ಟೋ ವಿಚಾರಗಳನ್ನು ಬಿತ್ತರಿಸುತ್ತಿರುತ್ತದೆ. ನಾವು ನಮ್ಮ ಪರಿಸರದೊಂಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಬಗೆಗೆ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಬಾಯ್ದೆರೆಯಾಗಿ ಹೇಳಿಸುವುದು. ಅವರು ಹೇಳಿದ ಅಭಿಪ್ರಾಯಗಳನ್ನಾಧರಿಸಿ ಹಿಂದಿನ ಕಾಲದಿಂದಲೇ ಇಂತಹ ಸಮಸ್ಯೆಗಳಿದ್ದವು ಎಂಬ ವಿಚಾರದ ಬಗ್ಗೆ ಬೆಳಕು ಬೀರುವುದು.

ಅಕ್ಕಮಹಾದೇವಿಯ ವಚನದ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ?' ಎಂದು ಆರಂಭವಾಗುವ ಸಾಲುಗಳಲ್ಲಿ ಬಂದಿರುವ ಅಭಿಪ್ರಾಯವನ್ನು ವಿದ್ಯಾರ್ಥಿಗಳು ಗುರುತಿಸಿಕೊಳ್ಳಲಿ. ಒಂದು ಕಿರು ಟಿಪ್ಪಣಿ ಬರೆಯಲಿ. ಬರೆದ ಟಿಪ್ಪಣಿಯನ್ನು ತರಗತಿಯ ಕೆಲವು ವಿದ್ಯಾರ್ಥಿಗಳು ಓದಲಿ. ಅಧ್ಯಾಪಕರ ಮಾರ್ಗದರ್ಶನದೊಂದಿಗೆ ಸೂಕ್ತ ತಿದ್ದುಪಡಿಯನ್ನು ಮಾಡಿ ವಿದ್ಯಾರ್ಥಿಗಳೆಲ್ಲರೂ ಬರೆದುಕೊಳ್ಳಲಿ.

ಭಕ್ತ / ಭಕ್ತೆಯೊಬ್ಬ / ಳು ತನಗೆ ಸಮಾಜದಿಂದ ಎದುರಾದ ನಿಂದೆ, ತೆಗಳಿಕೆಗಳಿಗೆ ಹೇಗೆ ಪ್ರತಿಕ್ರಯಿಸಿದ್ದಾಳೆಂದು ಅಕ್ಕಮಹಾದೇವಿಯ ಈ ವಚನದಿಂದ ತಿಳಿಯಬಹುದು. ಕಾಡಿನಲ್ಲಿ ಮನೆಯನ್ನು ಮಾಡಿ ಕಾಡುಪ್ರಾಣಿಗಳಿಗೆ ಹೆದರಬಾರದು. ಸಾಗರದ ಬದಿಯಲ್ಲಿ ಮನೆ ಮಾಡಿದರೆ ಅಲ್ಲಿ ಬರುವ ನೆರೆ ತೆರೆಗಳಿಗೆ ಅಂಜಬಾರದು. ಸಂತೆಯ ಮಧ್ಯೆ ಮನೆ ಮಾಡಿ ಅಲ್ಲಿ ಬರುವ ಸದ್ದುಗದ್ದಲಗಳಿಗೆ ಹೆದರಲಾಗದು ಲೋಕದಲ್ಲಿ ಹುಟ್ಟಿ ಬಂದ ಮೇಲೆ ಸಮಾಜದಿಂದ ಬರುವ ಹೊಗಳುವಿಕೆ ತೆಗಳುವಿಕೆಗಳಿಗೆ ನಾವು ಅಂಜುವ ಅಗತ್ಯವಿಲ್ಲ. ಇದೆಲ್ಲ ಸರ್ವೆ ಸಾಮಾನ್ಯ ವಿಚಾರಗಳು ಎಂಬುದನ್ನು ತಿಳಿಸುವುದು. ಹೀಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ಸಾಮಾಜಿಕ ಅರಿವನ್ನು ಹೊಂದಿದಲ್ಲಿ ಆ ಸಮಾಜವು ಉತ್ತಮ ಸಮಾಜವಾಗಬಹುದು. ವಚನ ಭಾಗವನ್ನು ಓದಿದ ಬಳಿಕ ವಿದ್ಯಾರ್ಥಿಗಳಿಗೆ ಕೆಲವು ಚಟುವಟಿಕೆಗಳನ್ನು ಕೊಡುವುದು.

- ಅಕ್ಕಮಹಾದೇವಿ (ಲೇಖಕಿ: ಶ್ರೀಮತಿ ಲೀಲಾವತಿ ಆರ್. ಪ್ರಸಾದ್) ಎಂಬ ಕಿರು ಪುಸ್ತಕವನ್ನು ಒದಗಿಸಿ ವಿದ್ಯಾರ್ಥಿಗಳಲ್ಲಿ ಓದಿಕೊಳ್ಳುವಂತೆ ಹೇಳುವುದು. ಅದರಲ್ಲಿ ಬಂದಿರುವ ಜೀವನ ಚರಿತ್ರೆಯ ಆಧಾರದಲ್ಲಿ ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನು ಸಂಗ್ರಹಿಸಿ ಒಂದು ಟಿಪ್ಪಣಿ ಬರೆಯಲಿ. ಬರೆದ ಟಿಪ್ಪಣಿಯನ್ನು ತರಗತಿಯಲ್ಲಿ ಓದಿಸುವುದು.
- ವಚನ ಸಾಹಿತ್ಯದ ಹುಟ್ಟು ಬೆಳವಣಿಗೆಯ ಬಗೆಗೆ ಒಂದು ಪ್ರಬಂಧವನ್ನು ಬರೆಯಲಿ. ಅದನ್ನು ತರಗತಿಯಲ್ಲಿ ಮಂಡಿಸಲಿ. ಚರ್ಚೆಯ ಬಳಿಕ ವಿದ್ಯಾರ್ಥಿಗಳು ಲೋಗ್ ಬುಕ್ಕಿನಲ್ಲಿ ಬರೆದುಕೊಳ್ಳಲಿ.

## ಬಸವಣ್ಣನವರ ವಚನ

ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ?

.......................................................

ತನುವಿನ ಕೋಪ ತನ್ನ ಹಿರಿತನದ ಕೇಡು

.......................................................

ನೆರೆ ಮನೆಯ ಸುಡದು ಕೂಡಲ ಸಂಗಮದೇವಾ

.......................................................

ಎಂಬ ಸಾಲುಗಳನ್ನು ಅಕ್ಕಮಹಾದೇವಿಯ ಬೆಟ್ಟದ ಮೇಲೊಂದು ................................ ಸಮಾಧಾನಿಯಾಗಿರಬೇಕು' ಎಂಬ ಸಾಲುಗಳೊಂದಿಗೆ ತುಲನೆ ಮಾಡಿ ಟಿಪ್ಪಣಿ ಬರೆಯಲಿ. ಬರೆದ ಟಿಪ್ಪಣಿಯನ್ನು ತರಗತಿಯಲ್ಲಿ ಓದಲಿ.

ರಂ.ಶ್ರೀ. ಮುಗಳಿಯವರು ಬರೆದ 'ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು. ಅದರಲ್ಲಿ ಬಂದಿರುವ ವಚನ ಸಾಹಿತ್ಯದ ರೂಪು ರೇಷೆ'ಯನ್ನು ಓದಿ ಅದರ ಆಧಾರದಲ್ಲಿ ವಚನ ಸಾಹಿತ್ಯದ ವಸ್ತು, ಭಾಷೆ, ರೂಪದ ಬಗ್ಗೆ ಬರೆದು ಒಂದು ನೇಮಿತಕಾರ್ಯವನ್ನು ಸಿದ್ಧಪಡಿಸಲಿ.

**ಸಾರಾಂಶ**

ಶ್ರೀಗಂಧವನ್ನು ಕಡಿದು ಕೊರೆದು ತೇದಾಗ ನೋವಾಯಿತೆಂದು ಅದು ತನ್ನ ಮೂಲಗುಣವಾದ ಪರಿಮಳವನ್ನು ಬಿಡಲಾರದು. ಚಿನ್ನವನ್ನು ಮೆದುಮಾಡಿ ಒರೆದು ನೋಡಿದಾಗ, ಕುಲುಮೆಯಲ್ಲಿ ಕರಗಿಸಿದಾಗ ತನ್ನ ಹೊಳಪನ್ನು ಬಿಡಲಾರದು. ಕಬ್ಬನ್ನು ಗಾಣದಲ್ಲಿ ಹಾಕಿ ಅರೆದಾಗ, ಬೇಯಿಸಿ ಪಾಕ ಮಾಡಿ ಸಕ್ಕರೆಯಾಗಿ ಪರಿವರ್ತಿಸಿದಾಗ ನೋವಾಯಿತೆಂದು ತನ್ನ ಸಿಹಿರುಚಿಯನ್ನು ಬಿಡಲಾರದು. ಹಾಗೆ ಭಕ್ತನು ಹಿಂದೆ ಮಾಡಿದ ಕೆಟ್ಟ ಗುಣಗಳೆಲ್ಲವನ್ನು ತಂದು ಆತನ ಮುಂದೆ ದೇವರು ಹಾಕಿದರೆ ಅದರಿಂದ ದೇವರಿಗೇ ಕೆಟ್ಟ ಹೆಸರು. ಭಕ್ತನು ಹಿಂದಿನದೆಲ್ಲವನ್ನೂ ಬಿಟ್ಟು ಈಗ ಹೇಗೆ ವರ್ತಿಸುತ್ತಾನೆ ಎಂಬುದು ಮುಖ್ಯ. ಭಕ್ತನಾಗಿರುವ ತನ್ನನ್ನು ದೇವರು ಕೊಂದರೂ ಶರಣು ಎಂಬ ಮನೋಭಾವವನ್ನೂ ಭಕ್ತನು ರೂಡಿಸಿಕೊಳ್ಳಬೇಕು.

ಲೋಕದಲ್ಲಿ ಹೊಗಳಿಕೆ ಮತ್ತು ತೆಗಳಿಕೆ ತೀರ ಸಾಮಾನ್ಯ. ಅದಕ್ಕೆ ಕಿವಿಕೊಡದೆ ಧರ್ಮ ನಿರತನಾಗಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ. ಬೆಟ್ಟದ ಮೇಲೆ ಮನೆಯನ್ನು ಮಾಡಿ ವಾಸಿಸುವವನು ಅಲ್ಲಿರುವ ಮೃಗಗಳಿಗೆ ಹೆದರಬಾರದು. ಸಮುದ್ರದ ದಡದಲ್ಲಿ ಮನೆಯ ಮಾಡಿದಾತನು ಅಲ್ಲಿ ಬರುವ ತೆರೆಗಳಿಗೆ ಹೆದರಬಾರದು. ಸಂತೆಯೊಳಗೆ ಮನೆಯ ಮಾಡಿಕೊಂಡವನು ಅಲ್ಲಿರುವ ಸದ್ದುಗದ್ದಲಗಳಿಗೆ ನಾಚಿಕೊಳ್ಳಬಾರದು. ಲೋಕದಲ್ಲಿ ಹುಟ್ಟಿದ ಭಕ್ತನು ಸ್ತುತಿ ನಿಂದೆಗಳನ್ನು ಸಹಜವೆಂಬಂತೆ ಸ್ವೀಕರಿಸಬೇಕು. ಹೊಗಳಿಕೆಗೆ ಹಿಗ್ಗದೆ, ನಿಂದನೆಗೆ ಕುಗ್ಗದೆ ಸಮಾಧಾನ ಚಿತ್ತದಿಂದ ಇರಬೇಕು.

ಹಳೆಗನ್ನಡ ಕಾಲವು ಸಾಹಿತ್ಯ ಕ್ಷೇತ್ರದಲ್ಲಿ ಸ್ತ್ರೀಯರು ಕೈಯಾಡಿಸದ ಕಾಲವಾಗಿತ್ತು. ಆದರೆ ನಡುಗನ್ನಡ ಕಾಲಕ್ಕಾಗುವಾಗ ಕ್ರಾಂತಿಯ ಮೂಲಕ ಸ್ವರೂಪವನ್ನು ಪಡೆದ ವಚನ ಸಾಹಿತ್ಯದಲ್ಲಿ ಸ್ತ್ರೀಯರೂ ಹೇಗೆ ತಮ್ಮ ಪ್ರಾತಿನಿಧ್ಯವನ್ನು ತೋರ್ಪಡಿಸಿರುವರು ಎಂಬುದಕ್ಕೆ ಅಕ್ಕಮಹಾದೇವಿಯವರು ನಿದರ್ಶನವಾಗಿದ್ದಾರೆ. ಸಮಾಜದ ಕೆಲವು ಆಚರಣೆಗಳನ್ನು ವಿಡಂಬಿಸಿ ಜನಮನದಲ್ಲಿ ಸ್ಥಾನ ಪಡೆದ ಮಹದ್ವ್ಯಕ್ತಿಯಾಗಿದ್ದಾಳೆ ಅಕ್ಕ ಮಹಾದೇವಿ.

ತನ್ನತನ ಎಂಬ ಗುಣವನ್ನು ಕೆಲವು ಉದಾಹರಣೆಗಳ ಮೂಲಕ ಪ್ರತಿಪಾದಿಸಿದ್ದಾಳೆ. ಶ್ರೀಗಂಧವನ್ನು ಎಷ್ಟು ತೇದರೂ ಅದು ತನ್ನ ಕಂಪನ್ನು ಬಿಡದು, ಚಿಕ್ಕ ಕಣದಲ್ಲೂ ಅದರ ಗುಣ ಅಡಕವಾಗಿದೆ. ಚಿನ್ನವನ್ನು ಎಷ್ಟು ಚಿಕ್ಕ ತುಣುಕಾಗಿ ಕಡಿದು ಒರೆದು ನೋಡಿದರೂ ತನ್ನ ಹೊಸತನವನ್ನು ಬಿಡದು, ಕಬ್ಬಿನ ಗಣೆನ್ನು ತುಂಡರಿಸಿ ಗಾಣದಲ್ಲಿ ಹಾಕಿ ಅರೆದರೂ ಅದರ ರಸ–ರುಚಿ ಒಂದೇ ಆಗರುತ್ತದೆ. ಅದು ತನ್ನ ನೋವನ್ನು ಎಂದೂ ತೋಡುವುದಿಲ್ಲ. ಅಂತೆಯೇ ಮನುಷ್ಯನನ್ನು ನಾನಾ ವಿಧದಲ್ಲಿ ಪರೀಕ್ಷಿಸಿ ನೋಡಿ, ಅವನನ್ನು ಜೀವನ ಕಲೆಯಲ್ಲಿ ಪಳಗಿದವನನ್ನಾಗಿಸುವುದೇ ಭಗವಂತನ ಉದ್ದೇಶ. ತಾಳ್ಮೆ, ಸಹನೆ ಇಲ್ಲಿ ಮುಖ್ಯ. ಮೇಲಿನ ಉದಾಹರಣೆಗಳಲ್ಲಿ ಕಂಡ ಗಂಧ, ಚಿನ್ನ, ಕಬ್ಬು ಇವೆಲ್ಲ ಸವೆದಷ್ಟೂ ಹೊಳಪು, ಪರಿಮಳ, ರುಚಿಯನ್ನು ಅಧಿಕವಾಗಿ ನೀಡುತ್ತದೆ. ಹಾಗೆಯೇ ಜೀವನದಲ್ಲಿ ಸುಖ–ದು:ಖಗಳು ಸಮಾನವಾಗಿ ಬಂದೊದಗುತ್ತದೆ. ಯಾವುದೇ ಸಂದರ್ಭದಲ್ಲಿ ಧೈರ್ಯದಿಂದ ಮುನ್ನಡೆಯಬೇಕೆಂಬ ಕಿವಿವಾಣಿ ಇಲ್ಲಿ ವ್ಯಕ್ತವಾಗಿದೆ.

ಸಂದರ್ಭ ಹಾಗೂ ಪರಿಸರಗಳಿಗೆ ಹೊಂದಿಕೊಂಡು ಹೇಗೆ ಬಾಳಬೇಕೆಂದು ಇಲ್ಲಿನ ವಚನಗಳಲ್ಲಿ ಹೇಳಿದ್ದಾಳೆ. ಬೆಟ್ಟದ ಮೇಲೊಂದು ಮನೆ ಮಾಡಿದರೆ ಅಲ್ಲಿನ ಮೃಗಗಳಿಗೆ ಹೆದರಬಾರದು, ಸಮುದ್ರ ತೀರದಲ್ಲಿ ಮನೆ ಮಾಡಿ ವಾಸಿಸುವವನು ತೆರೆಗಳಿಗೆ ಹೆದರಬಾರದು. ಸಂತೆಯೊಳಗೆ ಬದುಕುವವನು ಸದ್ದು ಗದ್ದಲಗಳಿಗೆ ನಾಚಬಾರದು ಹಾಗೆಯೇ ಸ್ತುತಿ ನಿಂದೆಗಳನ್ನು ಸಹಜವಾಗಿ ಸ್ವೀಕರಿಸಬೇಕು ಎನ್ನುವರು ವಚನಕಾರರು.

# ಕಲಿಸು ಜೀವನ ಕಲೆಯ

## ಪ್ರವೇಶ

ವಚನವೆಂಬ ರೂಪವನ್ನು ಆಧುನಿಕ ಕವಿಗಳು ಎತ್ತಿಕೊಂಡಿರುವ ವಿಚಾರವನ್ನು ಪ್ರಸ್ತಾಪಿಸುವುದು. ಅಧ್ಯಾಪಕರು ನಡುಗನ್ನಡದ ವಚನಗಳಂತೆ ಹೊಸಗನ್ನಡ ಕಾಲದಲ್ಲೂ ವಚನಗಳನ್ನು ಬರೆದ ಎಸ್.ವಿ. ಪರಮೇಶ್ವರ ಭಟ್ಟ, ಅಮೃತ ಸೋಮೇಶ್ವರ, ಸಿದ್ಧಯ್ಯ ಪುರಾಣಿಕ ಮೊದಲಾದವರ ಹೆಸರನ್ನು ಹೇಳಿ ಪ್ರಸ್ತುತ ವಚನಕಾರರನ್ನು ಪರಿಚಯಿಸುವುದು.

## ಕವಿಪರಿಚಯ

ಪಠ್ಯ ಪುಸ್ತಕದಲ್ಲಿ ನೀಡಿರುವ ವಚನಗಳನ್ನು ಬರೆದಿರುವ ಎಸ್.ವಿ. ಪರಮೇಶ್ವರ ಭಟ್ಟರು ಹೊಸಗನ್ನಡ ವಚನಕಾರರಲ್ಲಿ ಪ್ರಸಿದ್ಧರಾದವರು. ಇವರು ವಚನಗಳನ್ನು ಮಾತ್ರವಲ್ಲದೆ ಕವನಗಳನ್ನು, ವಿಮರ್ಶಾ ಲೇಖನಗಳನ್ನು, ಭಾಷಾಂತರ ಕೃತಿಗಳನ್ನು ಸುಭಾಷಿತಗಳನ್ನು ಬರೆದಿದ್ದಾರೆ. ಉತ್ತಮ ವಾಗ್ಮಿ ಕೂಡ ಆಗಿದ್ದರು. ಸರಳವಾದ ಇವರ ವಚನಗಳು ಎಲ್ಲರಿಗೂ ಸುಲಭದಲ್ಲಿ ಅರ್ಥವಾಗುವಂತಿದೆ.

ವಿದ್ಯಾರ್ಥಿಗಳಿಂದ ವಚನಗಳನ್ನು ಓದಿಸುವುದು. ಇಲ್ಲವೆ ಹಾಡಿಸುವುದು, ಓದುವಾಗ/ಹಾಡುವಾಗ ತಪ್ಪುಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸಲು ಸೂಚಿಸುವುದು. ಬಳಿಕ ವಚನಗಳ ಹಾಡುಗಳನ್ನೊಳಗೊಂಡ ಅಡಕ ಮುದ್ರಿಕೆಗಳನ್ನು ಉಪಯೋಗಿಸಿ ವಚನವನ್ನು ಕೇಳಿಸುವುದು. ಅದನ್ನು ಆಲಿಸಿದ ವಿದ್ಯಾರ್ಥಿಗಳಿಗೆ ಸಂಶಯಗಳಿದ್ದಲ್ಲಿ ಪರಿಹರಿಸುವುದು. ನಂತರ ಒಂದೊಂದು ವಚನವನ್ನು ಒಬ್ಬೊಬ್ಬರಿಂದ ಓದಿಸುವುದು. ಓದಿದ ಬಳಿಕ ಆ ವಚನದ ಆಶಯವನ್ನು ಅವರು ಹೇಳಲಿ. ಇತರ ವಿದ್ಯಾರ್ಥಿಗಳು ಅದನ್ನು ಗಮನಿಸಿ ತಮ್ಮ ಅಭಿಪ್ರಾಯವನ್ನು ಹೇಳಲಿ. ಅಧ್ಯಾಪಕರು ಸೂಕ್ತವಾದ ತಿದ್ದುಪಡಿಯನ್ನು ಸೂಚಿಸುವುದು.

ಪದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅವುಗಳನ್ನು ವಿಂಗಡಿಸಿ ಓದಲು ಹೇಳುವುದು. ಅದನ್ನು ಅವರು ಬರೆದುಕೊಳ್ಳಲಿ.

ಉದಾ :

| | | |
|---|---|---|
| ಜತೆಗೆ + ಒಬ್ಬರು | – | ಜತೆಗೊಬ್ಬರು |
| ಇರುಳು + ಆಗೆ | – | ಇರುಳಾಗೆ |
| ತನಿ + ಒಲುಮೆ | – | ತನಿಯೊಲುಮೆ |
| ನಿನ್ನ + ಅನುಗ್ರಹ + ಇರಬೇಕು | – | ನಿನ್ನನುಗ್ರಹಿಸಿರಬೇಕು |
| ನುಂಗಿತು + ಎಂಬ | – | ನುಂಗಿತೆಂಬ |

**ಪ್ರಾಸ**

ವಚನಗಳಲ್ಲಿ ಬಂದಿರುವ ಅಂತ್ಯ ಪ್ರಾಸವನ್ನು ಗುರುತಿಸಲು ಹೇಳುವುದು.

ಉದಾ: ದೋಣಿ ಮುಳುಗಲು ಸಣ್ಣದೊಂದು ತೂತು ಸಾಲದೆ

................................ ಕಿಡಿ ಸಾಲದೆ

.................................. ಮಾತು ಸಾಲದೆ

ವಿದ್ಯಾರ್ಥಿಗಳು ಗುರುತಿಸುತ್ತಾರೆ. ಪ್ರಾಸದ ನಿಯಮವನ್ನು ಅವರಲ್ಲಿ ಹೇಳಿಸುವುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಸ್ಪಷ್ಟವಾಗಿ ತಿಳಿಸಿಕೊಡುವುದು. ಅದನ್ನು ಎಲ್ಲ ವಿದ್ಯಾರ್ಥಿಗಳು ಬರೆದು ಕೊಳ್ಳಲಿ.

ವಿದ್ಯಾರ್ಥಿಗಳಿಗೆ ವಚನಗಳ ಆಶಯ ಸ್ಪಷ್ಟವಾಗಿರಬಹುದು. ಅದನ್ನು ಪ್ರತಿಯೊಬ್ಬರು ಬರೆಯಲಿ. ಕೆಲವು ವಿದ್ಯಾರ್ಥಿಗಳಿಂದ ಅದನ್ನು ಓದಿಸುವುದು. ತಿದ್ದುಪಡಿ ಅಗತ್ಯವಿದ್ದಲ್ಲಿ ಸೂಚಿಸುವುದು.

ಮನುಷ್ಯರು ತಮ್ಮ ಜೀವನದ ಪ್ರತಿಯೊಂದು ಸಂದರ್ಭದಲ್ಲೂ ಎಷ್ಟೊಂದು ಗಮನವಿಟ್ಟು ಮುನ್ನಡೆಯ ಬೇಕೆಂಬುದನ್ನು ವಚನಕಾರರು ತಮ್ಮ ವಚನದಲ್ಲಿ ಹೇಳಿದ್ದಾರೆ. ವಿದ್ಯಾರ್ಥಿಗಳಿಗೂ ಅವರ ಜೀವನದಲ್ಲಿ ಅಂತಹ ಕೆಲವು ಅನುಭವ ಉಂಟಾಗಿರಬಹುದು. ಅದನ್ನು ಕಿರುಲೇಖನ ರೂಪದಲ್ಲಿ ಬರೆಯಲಿ. ತರಗತಿ ಓದಿ ಹೇಳಲಿ.

ಪ್ರಾಚೀನ ಹಾಗೂ ಆಧುನಿಕ ವಚನಕಾರರ ವಚನಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದಾರೆ. ಅವುಗಳಲ್ಲಿನ ವ್ಯತ್ಯಾಸವನ್ನೂ ಅವರು ಗಮನಿಸಿರ ಬಹುದು. ರಚನೆಯ ದೃಷ್ಟಿಯಿಂದ ಅವುಗಳೆರಡನ್ನೂ ಹೋಲಿಸಿ ಟಿಪ್ಪಣಿಯನ್ನು ಬರೆಯಲು ಸೂಚಿಸುವುದು. ತರಗತಿಯಲ್ಲಿ ಮಂಡಿಸುವುದು.

ಜೀವನದಲ್ಲಿ ಯಶಸ್ವಿಯಾಗಲು ವಿವಿಧ ಸಂದರ್ಭಗಳಲ್ಲಿ ಇನ್ನೊಬ್ಬರ ಮಾರ್ಗದರ್ಶನ ಅಗತ್ಯವಾಗುತ್ತದೆ. ವಿದ್ಯಾರ್ಥಿಗಳೂ ತಮ್ಮ ಜೀವನದಲ್ಲಿ ಹಲವು ವಿಧದದಲ್ಲಿ ಅದನ್ನು ಪಡೆದಿರಬಹುದು. ಅವುಗಳನ್ನು ಅವರು ಬರೆಯಲಿ. ತರಗತಿಯಲ್ಲಿ ಮಂಡಿಸಲಿ.

ವಿದ್ಯಾರ್ಥಿಗಳು ಇತರ ಆಧುನಿಕ ವಚನಕಾರರ ವಚನಗಳನ್ನು ಪರಿಚಯ ಮಾಡಿಕೊಳ್ಳಲಿ. ಅದಕ್ಕಾಗಿ ಅವರ ಕೆಲವು ವಚನಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಓದಲಿ. ಅವುಗಳ ವಿಶೇಷತೆಗಳನ್ನು ಗುರುತಿಸಿ ಎಲ್ಲರೂ ಪುಸ್ತಕದಲ್ಲಿ ಬರೆದುಕೊಳ್ಳಲಿ.

ವಚನಗಳಲ್ಲಿ ಬಂದಿರುವ ವಿಷಯಕ್ಕೆ ಸಂಬಂಧಿಸಿದ ಇತರ ಗಾದೆ ಮಾತುಗಳನ್ನು ಗುರುತಿಸಿ, ಅದರ ವಿವರಣೆಯನ್ನು ಬರೆಸುವುದು.

**ಗಾದೆಮಾತು**

ಉದಾ : ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು.

ಎಲ್ಲ ಬಣ್ಣ ಮಸಿ ನುಂಗಿದಂತೆ

'ಜೀವನ ಕಲೆ' ಎಂಬ ವಿಷಯದಲ್ಲಿ ಚರ್ಚಾಗೋಷ್ಠಿಯೊಂದನ್ನು ಏರ್ಪಡಿಸುವುದು. ಎಲ್ಲ ವಿದ್ಯಾರ್ಥಿಗಳೂ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡುವುದು. ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯವನ್ನು ಎಲ್ಲ ವಿದ್ಯಾರ್ಥಿಗಳೂ ಬರೆದುಕೊಳ್ಳಲಿ. ಶಾಲೆಯ ಭಿತ್ತಿ ಪತ್ರಿಕೆಯಲ್ಲಿ ಭಿತ್ತಿ ಪತ್ರಿಕೆಗಾಗಿ ಲೇಖನ ಬರೆಯುವುದು. ಪ್ರತಿಯನ್ನು ಪ್ರದರ್ಶಿಸುವುದು.

## ಸಾರಾಂಶ

ನೀರಿನಲ್ಲಿ ಸಂಚರಿಸುವ ದೋಣಿಗೆ ಚಿಕ್ಕ ರಂಧ್ರವೊಂದು ಉಂಟಾದರೆ ನೀರೆಲ್ಲ ಆ ದೋಣಿಯೊಳಗೆ ತುಂಬಿ ದೋಣಿ ಮುಳುಗಿ ಅಪಾಯ ಉಂಟಾಗಬಹುದು. ಬೆಂಕಿಯ ಚಿಕ್ಕ ಕಿಡಿಯೊಂದು ಮನೆಯನ್ನೇ ಸುಟ್ಟು ನಾಶಮಾಡಬಹುದು. ನಾವು ಬಾಯಿ ತಪ್ಪಿ ಆಡಿದ ಚಿಕ್ಕ ಮಾತೊಂದು ನಮ್ಮ ಮನೆಯ ನೆಮ್ಮದಿಯನ್ನೇ ಸಂಪೂರ್ಣವಾಗಿ ಹಾಳು ಮಾಡಬಹುದು. ಸುಂದರವಾದ ಚಿತ್ರವೊಂದನ್ನು ಕೆಡಿಸಲು ಒಂದು ತುಣುಕು ಮಸಿ ಸಾಕಾಗುತ್ತದೆ ಎಂಬ ಗಾದೆ ಮಾತೇ ಇದೆ. ಹೀಗೆ ಹೇಳುವ ಮೂಲಕ ಮನುಷ್ಯರು ಜೀವನದಲ್ಲಿ ತಮ್ಮಿಂದ ಸಣ್ಣದೊಂದು ತಪ್ಪು ಕೂಡ ನಡೆಯದಂತೆ ಗಮನವಿಟ್ಟು ಮುನ್ನಡೆಯಬೇಕು. ಆಗ ಮಾತ್ರ ಜೀವನವು ಯಶಸ್ವಿಯಾಗಬಹುದೆಂಬ ಸಂದೇಶವನ್ನು ಕವಿ ಇಲ್ಲಿ ನೀಡಿದ್ದಾರೆ.

ನಾವು ಮಾರ್ಗದಲ್ಲಿ ಸಂಚರಿಸುವಾಗ ಮುಂದೆ ಆ ಮಾರ್ಗವು ಕವಲೊಡೆದು ಕಾಣಿಸುತ್ತದೆ. ಅಲ್ಲಿ ಮಾರ್ಗಸೂಚಿಯೊಂದಿದ್ದರೆ ಮಾತ್ರ ಅದರ ಸಹಾಯದಿಂದ ನಮಗೆ ನಮ್ಮ ಗುರಿಯತ್ತ ಮುಂದುವರಿಯಲು ಸಾಧ್ಯವಾಗುತ್ತದೆ. ಮುಂದೆ ಹಳ್ಳವೊಂದು ಎದುರಾದರೆ ಅದನ್ನು ದಾಟಲು ಸಂಕವೊಂದರ ಸಹಾಯ ಬೇಕಾಗುತ್ತದೆ. ರಾತ್ರಿಯಾಗಲು ತೊಡಗಿದರೆ ತಂಗಲು ಛತ್ರವೊಂದರ ಸಹಾಯ ಅಗತ್ಯವಾಗುತ್ತದೆ. ಹೀಗೆ ಸಾಗುವಾಗ ಜೊತೆಗೊಬ್ಬರು ಇರುವುದು. ಎಲ್ಲ ರೀತಿಯಿಂದಲೂ ಅಗತ್ಯವಾಗುತ್ತದೆ. ಜೀವನ ನಡೆಸಲು ಕೈಯಲ್ಲಿ ಯಾವಾಗಲೂ ಹಣವಿರಬೇಕಾಗುತ್ತದೆ. ಹಣ ಮಾತ್ರವಿದ್ದರೆ ಸಾಕಾಗುವುದಿಲ್ಲ. ಅದನ್ನು ಅನುಭವಿಸಲು ದೇಹದಲ್ಲಿ ಶಕ್ತಿಯೂ, ಆರೋಗ್ಯವೂ ಇರಬೇಕಾಗುತ್ತದೆ. ಹೀಗೆ ಜೀವನದ ಪ್ರತಿಯೊಂದು ಘಟ್ಟದಲ್ಲೂ ಇನ್ನೊಬ್ಬರ ಸಹಾಯ ಬೇಕೇ ಬೇಕು. ಇವೆಲ್ಲ ಸಿಗಲು ಮುಖ್ಯವಾಗಿ ದೇವರ ಅನುಗ್ರಹವಿರಬೇಕೆಂಬುದು ಕವಿಯ ಅಭಿಪ್ರಾಯ.

ಭಕ್ತನಾದವನಿಗೆ ದೇವರ ಬಗೆಗಿನ ತನ್ನ ಪ್ರೀತಿ, ಭಕ್ತಿ ಎಷ್ಟೆಂದು ಇತರರಿಗೆ ತಿಳಿಸಲು, ತೋರಿಸಲು ಅಸಾಧ್ಯ. ಅದು ಸ್ವತಃ ಅನುಭವಿಸಲು ಮಾತ್ರ ಸಾಧ್ಯ ಎಂಬುದನ್ನು ಉದಾಹರಣೆ ನೀಡುವುದರ ಮೂಲಕ ಇಲ್ಲಿ ಹೇಳಿದ್ದಾರೆ. ಹೂವಿನ ಆಕಾರವನ್ನು ನಾವು ಕಾಣುತ್ತೇವೆ. ಆದರೆ ಅದರಿಂದ ಹೊರಹೊಮ್ಮುವ ಪರಿಮಳವನ್ನು ಕಣ್ಣಿನಿಂದ ಕಾಣಲು  ಸಾಧ್ಯವಿಲ್ಲ, ಅದು ಸ್ವತಃ ಅನುಭವಕ್ಕೆ ಬರುವಂತಹುದು. ಅದೇ ರೀತಿ ದೀಪವನ್ನು ಉರಿಸುವ ಹಣತೆಗೆ ನಿರ್ದಿಷ್ಟ ಆಕಾರವಿದೆ. ಆದರೆ ಅದರಲ್ಲಿನ ಬೆಳಕಿಗೆ  ಆ ತರಹ ಆಕಾರವಿಲ್ಲ. ಆಕಾಶದಲ್ಲಿ ಕಾಣಿಸುವ ಚಂದ್ರನಿಗೆ ಆಕಾರವಿದೆ. ಬೆಳದಿಂಗಳಿಗೆ ಆಕಾರವಿಲ್ಲ. ಭಕ್ತನು ಧರಿಸುವ ನಾಮ, ಮುದ್ರೆ, ವಿಭೂತಿ, ರುದ್ರಾಕ್ಷೆಗಳಿಗೆ ಆಕಾರವಿದೆ. ಆದರೆ ಭಕ್ತನ ಮನಸ್ಸಿನಲ್ಲಿರುವ ಶುದ್ಧ ಪ್ರೀತಿ, ಭಕ್ತಿಗಳಿಗೆ ಆಕಾರವಿಲ್ಲ. ಆದರೆ ಅದು ಅಪಾರವಾದುದು.

ತಾನು ಹುಟ್ಟಿದ ಭೂಮಿಯ ಕುರಿತು ತಿಳಿಯದವನು ಅಲ್ಲಿರುವ ನೀರಿನ ಆಳವನ್ನು ತಿಳಿಯಲು ಸಾಧ್ಯವಿಲ್ಲ. ತನ್ನ ಜೀವನದ ಮಹತ್ವವನ್ನು ತಿಳಿಯದವನು ಕಾವ್ಯದ ಬೆಲೆಯನ್ನು ತಿಳಿಯಲಾರನು. ಉತ್ತಮ ಜೀವನವನ್ನೇ

ನಡೆಸಲು ಅರಿಯದವನಿಗೆ ಕಾವ್ಯವನ್ನು ಬರೆಯಲು ಸಾಧ್ಯವಾಗದು. ತನ್ನ ಜೀವನದ ಸ್ಥಿತಿಯೂ ಹೀಗೆಯೇ ಆಗಿದೆ. ಜೀವನದ ಮಹತ್ವವನ್ನು ಜೀವಿಸುವ ಕಲೆಯನ್ನು ಸಂಪೂರ್ಣವಾಗಿ ಅರಿತಿರುವವನು ನೀನು. ತನಗೂ ಅದನ್ನು ತಿಳಿಸಿಕೊಟ್ಟು ಈ ಜೀವನವನ್ನು ಸಾರ್ಥಕಗೊಳಿಸುವಂತೆ ಮಾಡೆಂದು ಕವಿಯು ದೇವರಲ್ಲಿ ಬೇಡಿಕೊಳ್ಳುವುದನ್ನು ಇಲ್ಲಿ ಕಾಣಬಹುದು.

ನೀರಲ್ಲಿ ಸಂಚರಿಸುವ ದೋಣಿ ಮುಳುಗಲು ಒಂದು ಸಣ್ಣ ತೂತು ಸಾಕು. ಮನೆಯನ್ನು ಸುಡಲು ಒಂದು ಸಣ್ಣ ಕಿಡಿ ಸಾಕು. ಮನೆಯ ನೆಮ್ಮದಿ ಕೆಟ್ಟು ಹೋಗಲು ಸಣ್ಣ ಒಂದು ಮಾತು ಸಾಕು. ಒಳ್ಳೆಯ ಒಂದು ಚಿತ್ರವನ್ನು ಕೆಡಿಸಲು ಒಂದು ತುಣುಕು ಮಸಿ ಸಾಕು ಎಂಬ ಗಾದೆಯೇ ಇದೆ. ಮನುಷ್ಯನ ಜೀವನದಲ್ಲಾಗಿ ಹೋಗುವ ಸಣ್ಣ ತಪ್ಪು ಕೂಡ ಅವನ ನಾಶಕ್ಕೆ ಕಾರಣವಾಗಬಹುದು ಎಂಬ ಆಶಯವಿಲ್ಲಿದೆ.

ಕವಲು ದಾರಿಯ ಬಳಿಯಲ್ಲಿ ಒಂದು ಮಾರ್ಗಸೂಚಿ ಇರಬೇಕು. ಹಳ್ಳ ದಾಟಲು ಒಂದು ಸೇತುವೆ(ಸಂಕ) ಬೇಕು. ರಾತ್ರಿಯಾಗುವಾಗ ತಂಗಲು ಒಂದು ಛತ್ರ ಬೇಕು. ದಾರಿಯಲ್ಲಿ ನಡೆಯುವಾಗ ಒಬ್ಬ ಜತೆಗಾರ ಬೇಕು. ಕೈಯಲ್ಲಿ ಹಣ ಬೇಕು. ಮೈಯಲ್ಲಿ ಶಕ್ತಿ ಇರಬೇಕು. ಇಷ್ಟೆಲ್ಲಾ ದೊರೆಯುವುದಕ್ಕೆ ದೇವರ ಅನುಗ್ರಹ ಬೇಕು.

ಹೂವಿಗೆ ಆಕಾರವಿರುವುದಲ್ಲದೆ ಪರಿಮಳಕ್ಕಿಲ್ಲ. ಹಣತೆಗೆ ಆಕಾರವಿರುತ್ತದೆ. ಆದರೆ ಬೆಳಕಿಗೆ ಇರುವುದಿಲ್ಲ. ಚಂದ್ರನಿಗೆ ಆಕಾರವಿರುತ್ತದೆ. ಬೆಳದಿಂಗಳಿಗೆ ಇಲ್ಲ. ನಾಮ, ಮುದ್ರೆ, ವಿಭೂತಿ, ರುದ್ರಾಕ್ಷಿಗಳಿಗೆ ಆಕಾರವಿರುತ್ತದೆ. ಆದರೆ ಭಕ್ತನ ಹೃದಯದಲ್ಲಿರುವ ನೈಜ ಪ್ರೀತಿಗೆ ಆಕಾರವಿರುವುದಿಲ್ಲ.

ನೆಲದ ನೆಲೆಯನ್ನು ಅರ್ಥಮಾಡಿಕೊಳ್ಳದವನು ನೀರಿನ ಆಳವನ್ನು ಅರಿಯಲಾರನು. ಬದುಕಿನ ಬೆಲೆಯನ್ನು ತಿಳಿಯದವನು ಕಾವ್ಯದ ಮಹತ್ವವನ್ನು ತಿಳಿಯಲಾರದು. ಜೀವನ ಕಲೆಯನ್ನು ಕಲಿಯದವನು ಕಾವ್ಯದ ಕಲೆಯನ್ನು ಕಲಿಯಲಾರನು. ಮನುಷ್ಯನು ತನ್ನ ಅಸ್ತಿತ್ವದ, ಮಾನವನ ಬದುಕಿನ ಮತ್ತು ಕಲೆಯ ಮಹತ್ವನ್ನು ಮೊದಲು ತಿಳಿದುಕೊಳ್ಳಬೇಕು. ಜೀವನದ ಕಲೆಯ ಕೋವಿದನಾದ ಪರಮಾತ್ಮನೇ ಅದನ್ನು ತಿಳಿಸಬೇಕೆಂದು ಕವಿ ವಿನಂತಿಸುತ್ತಾನೆ.

## ಪರಾಮರ್ಶನ ಗ್ರಂಥಗಳು


- ವಚನ ಮಂಜರಿ – ಜ.ಚ.ನಿ.
- ಶಿವಶರಣೆಯರ ವಚನ ಸಂಪುಟ – ಡಾ. ವೀರಣ್ಣ ರಾಜೂರ
- ವಚನಾನುಭವ – ಪ್ರೊ. ಆರ್. ರಾಚಪ್ಪ
- ಬಸವ ವಚನಾಮೃತ – ಡಾ. ಎಲ್. ಬಸವರಾಜು
- ಶರಣ ನೂರೊಂದು ವಚನಗಳು – ಡಾ. ಪ್ರಭುಶಂಕರ
- ವಚನ ಸಾವಿರ – ಓ.ಎಲ್. ನಾಗಭೂಷಣ ಸ್ವಾಮಿ
- ಕದಳಿಯ ಕರ್ಪೂರ – ತಿಪ್ಪೇರುದ್ರಸ್ವಾಮಿ


* * *

# 2 ಕೀರ್ತನ ಮಾಧುರಿ

ಘಟಕ 2 : ಕೀರ್ತನ ಮಾಧುರಿ

ಸಮಯ : 15 ಗಂಟೆಗಳು

**ಕಲಿಕಾ ಸಾಮಗ್ರಿಗಳು**

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ (ಡಿ.ವಿ.ಡಿ.)
- ಅಂತರ್ಜಾಲ
- ಸಾಕ್ಷ್ಯಚಿತ್ರಗಳು, ಸಿನಿಮಾ
- ಪರಾಮರ್ಶನ ಗ್ರಂಥಗಳು

**ಮೌಲ್ಯಗಳು ಹಾಗೂ ಮನೋಭಾವಗಳು**

- ಕೀರ್ತನೆಗಳನ್ನು ಆಸ್ವಾದಿಸುವ ಮನೋಭಾವ
- ಜೀವನದಲ್ಲಿ ಅನುಸರಿಸಬೇಕಾದ ಮೌಲ್ಯಗಳನ್ನು ತಿಳಿದುಕೊಳ್ಳುವುದು.
- ಕೀರ್ತನೆಗಳನ್ನು ಹಾಡುವುದು.
- ಕರ್ತವ್ಯಗಳನ್ನು ಪಾಲಿಸುವ ಮನೋಭಾವ
- ಸದಾಚಾರ ಹಾಗೂ ಪರೋಪಕಾರ ಮನೋಭಾವ
- ನೀರಿನ ಸಂರಕ್ಷಣೆಯನ್ನು ಮಾಡುವ ಮನೋಭಾವ

# ಮುನ್ನುಡಿ

ಹರಿದಾಸ ಸಾಹಿತ್ಯವು ಭಾರತೀಯ ಸಾಹಿತ್ಯಕ್ಕೆ ಕನ್ನಡವು ನೀಡಿರುವ ವಿಶಿಷ್ಟ ಕೊಡುಗೆಯಾಗಿದೆ. ಹರಿದಾಸರು ರಚಿಸಿದ ಒಂದು ಪದ್ಯ ಪ್ರಕಾರವನ್ನು ಕೀರ್ತನೆಗಳು ಎಂದು ಕರೆಯುತ್ತಾರೆ. ದಾಸರ ಪದಗಳು ಎಂಬ ಹೆಸರೂ ಇದಕ್ಕಿದೆ. ಸಾಹಿತ್ಯ ಹಾಗೂ ಸಂಗೀತ ಅಂಶಗಳು ಸೇರಿಕೊಂಡ ಕೀರ್ತನೆಯು ತನ್ನ ಸರಳ ಭಾಷೆ, ಅರ್ಥಪೂರ್ಣವಾದ ಮಾತುಗಳಿಂದಾಗಿ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿ ಬೆಳೆಯಿತು. ಭಕ್ತಿಯ ಮೂಲಕ ಸಮಾಜ ಸುಧಾರಣೆಯ ಉದ್ದೇಶವನ್ನು ಹೊಂದಿದ ಈ ಸಾಹಿತ್ಯವು ನರಹರಿ ತೀರ್ಥದಿಂದ ಆರಂಭವಾಗಿ ಕರ್ನಾಟಕ ಸಂಗೀತ ಪಿತಾಮಹರೆನಿಸಿದ ಪುರಂದರದಾಸ ಹಾಗೂ ಕನಕದಾಸರಿಂದ ಪ್ರಸಿದ್ಧವಾಯಿತು.

ಜಾತಿ, ಧರ್ಮ, ವರ್ಗಗಳು ಮುಖ್ಯವಲ್ಲ. ಮಾನವೀಯತೆಯೇ ಎಲ್ಲಕ್ಕಿಂತ ಮೇಲು ಎಂಬುದನ್ನು ತಿಳಿಸಿ ಸಮಾಜದಲ್ಲಿ ನೆಲೆಯೂರಿದ್ದ ಬಡವ –ಶ್ರೀಮಂತ, ಮೇಲು ಕೀಳು ಎಂಬ ಮನೋಭಾವ, ಅಸ್ಪೃಶ್ಯತೆ ಢಂಭಾಚಾರಗಳನ್ನು ಕುರಿತು ಜನರಿಗೆ ಅರಿವು ಮೂಡಿಸಿ ಅವರನ್ನು ಎಚ್ಚರಿಸಲು ಸಮರ್ಥವಾದ ಕೀರ್ತನೆ ಎಂಬ ಸಾಹಿತ್ಯಪ್ರಕಾರವನ್ನೂ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಪುರಂದರ ದಾಸರ, ಕನಕದಾಸರ ಹಾಗೂ ಹೆಳವನಕಟ್ಟೆ ಗಿರಿಯಮ್ಮನವರ ಒಂದೊಂದು ಕೀರ್ತನೆಯನ್ನು ಈ ಘಟಕದಲ್ಲಿ ಕೊಡಲಾಗಿದೆ.

# UNIT FRAME

**ಘಟಕ 2 : ಕೀರ್ತನ ಮಾಧುರಿ** ಸಮಯ : 15 ಗಂಟೆಗಳು

## ಕಲಿಕಾ ಸಾಧನೆಗಳು

- ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯದಲ್ಲಿನ ಕೀರ್ತನ ಪ್ರಕಾರಗಳನ್ನು ಆಳವಾಗಿ ಅಧ್ಯಯನ ಮಾಡುತ್ತಾರೆ.
- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಪ್ರತಿಬಿಂಬಿತವಾದ ಸಾಮಾಜಿಕ ಜೀವನ, ಸಮಾಜ ವಿಮರ್ಶೆ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುತ್ತಾರೆ.
- ಜೀವನಾನುಭವಗಳನ್ನು ಗದ್ಯ, ಪದ್ಯರೂಪಗಳಲ್ಲಿ ನಿರೂಪಿಸುತ್ತಾರೆ.

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಕೀರ್ತನೆಗಳ ಹುಟ್ಟು, ಬೆಳವಣಿಗೆ, ಮಹತ್ವಗಳ ಪರಿಚಯ | • ಪೂರ್ವಜ್ಞಾನವನ್ನು ತಿಳಿಯುವುದು.<br>• ವಿದ್ಯಾರ್ಥಿಗಳು ತಮಗೆ ತಿಳಿದಿರುವ ಕೀರ್ತನೆಗಳನ್ನು ಹಾಡುವುದು.<br>• ಕೀರ್ತನೆಯೊಂದರ ಅಡಕ ಮುದ್ರಿಕೆಯನ್ನು ಕೇಳಿಸುವುದು.<br>• ಸಂಗೀತ ಬದ್ಧವಾದ ಅದರ ವೈಶಿಷ್ಟ್ಯವನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು.<br>• ಕೀರ್ತನೆಗಳ ಹುಟ್ಟು, ಬೆಳವಣಿಗೆಗಳ ಕುರಿತು ಇತರ ಕೃತಿಗಳಿಂದ ವಿಷಯಗಳನ್ನು ಸಂಗ್ರಹಿಸಲು ಸೂಚಿಸುವುದು. ತರಗತಿಯಲ್ಲಿ ಮಂಡಿಸುವುದು.<br>• ಪಠ್ಯದಲ್ಲಿನ ಕೀರ್ತನೆಗಳನ್ನು ಹಾಡಿಸುವುದು/ಓದಿಸುವುದು.<br>• ಅಧ್ಯಾಪಕರು ಕೀರ್ತನೆಗಳನ್ನು ಹಾಡುವುದು.<br>• ಕೀರ್ತನೆಗಳ ಸಾರಾಂಶವನ್ನು ಬರೆಸುವುದು.<br>• ಆಸ್ವಾದನ ಟಿಪ್ಪಣಿ ಬರೆಸುವುದು. ಮೌಲ್ಯ ಮಾಪನ ನಡೆಸುವುದು.<br>• ಹಾಡುವ/ಓದುವ ಸಾಮರ್ಥ್ಯವನ್ನು ಗುರುತಿಸುವುದು. | ಟಿಪ್ಪಣಿ ಬರೆಯುವುದು.<br><br>ಸಂಗ್ರಹ ಲೇಖನ<br><br>ಹಾಡುವ ಸಾಮರ್ಥ್ಯ ಗಳಿಸುವುದು.<br><br>ಆಸ್ವಾದನಾ ಟಿಪ್ಪಣಿ ಬರೆಯುವುದು. |

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಸಮಾಜದ ಉದ್ಧಾರಕ್ಕೆ ಕೀರ್ತನೆಗಳಲ್ಲಿ ನೀಡಿರುವ ಸಂದೇಶಗಳು.<br><br>ಅಂತರ್ಜಾಲದ ಸಹಾಯವನ್ನು ಬಳಸಿ ಹೆಚ್ಚಿನ ವಿಷಯಗಳನ್ನು ತಿಳಿಯುವುದು. | • ಕೀರ್ತನೆಗಳಲ್ಲಿ ಹೇಳುವ ವಿಷಯಗಳನ್ನು ಇಂದಿನ ಸಮಾಜದೊಂದಿಗೆ ಹೋಲಿಸಿ ಲೇಖನ ಬರೆಯುವುದು – ಲೇಖನ ಬರೆಯುವ ಸಾಮರ್ಥ್ಯ<br>• ವಿವಿಧ ಕೀರ್ತನೆಕಾರರ ಕೀರ್ತನೆಗಳಲ್ಲಿನ ಸಮಾನ ಅಂಶಗಳನ್ನು ಗುರುತಿಸುವುದು. ಟಿಪ್ಪಣಿ ಬರೆಯುವುದು.<br>• ವಿವಿಧ ಮಾಧ್ಯಮಗಳಲ್ಲಿ ಕೀರ್ತನೆಗಳ ಬಳಕೆಯಾದ ಬಗೆಯನ್ನು ತಿಳಿಯುವುದು. (ಟಿ.ವಿ., ಸಿನಿಮಾ, ಸಾಕ್ಷ್ಯಚಿತ್ರ...) – ಮಾಹಿತಿ ತಂತ್ರಜ್ಞಾನದ ಬಳಕೆ<br>• ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕೀರ್ತನೆಗಳ ಕೊಡುಗೆಯ ಕುರಿತು ಪ್ರಬಂಧ ಬರೆಯುವುದು – ಪ್ರಬಂಧ.<br>• ಕೀರ್ತನೆಗಳನ್ನು ಹಾಡಿಸಿ ಧ್ವನಿ ಮುದ್ರಿಸುವುದು. – ಹಾಡು, ಧ್ವನಿಮುದ್ರಣದ ಸಾಮರ್ಥ್ಯ | ಲೇಖನ<br><br>ಟಿಪ್ಪಣಿ ಬರೆಯುವರು.<br><br>ಮಾಹಿತಿ ತಂತ್ರಜ್ಞಾನವನ್ನು ಬಳಸುವರು.<br>ಪ್ರಬಂಧ ಬರೆಯುವರು.<br><br>ಧ್ವನಿ ಮುದ್ರಿಸಿದ ಸಿ.ಡಿ. |
| ನೈಪುಣ್ಯಗಳು | • ಕೀರ್ತನೆಗಳನ್ನು ಆಸ್ವಾದಿಸುವ ಆಸ್ವಾದನಾ ಟಿಪ್ಪಣಿಗಳನ್ನು ಬರೆಯುವ ಸಾಮರ್ಥ್ಯ.<br>• ಕೀರ್ತನೆಗಳನ್ನು ಹಾಡುವ ಸಾಮರ್ಥ್ಯ.<br>• ಲೇಖನಗಳನ್ನು ಬರೆಯುವ ಸಾಮರ್ಥ್ಯ.<br>• ಕಾವ್ಯಗಳ ಓದಿನಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬಳಸುವ ಸಾಮರ್ಥ್ಯ. | |

# TEACHER PLANNER

| | | |
|---|---|---|
| ಪಾಠದ ಹೆಸರು | : | ಬೇವು ಬೆಲ್ಲದೊಳಿಡಲೇನು ಫಲ |
| ದಿನಾಂಕ | : | |
| ನಿರೀಕ್ಷಿಸುವ ಸಮಯ | : | 4 ಗಂಟೆಗಳು |
| ವಿಷಯ | : | ಸಮಾಜದಲ್ಲಿ ನೆಲೆನಿಂತಿರುವ ಅನಾಚಾರ ಕಪಟ ಭಕ್ತಿ, ಡಂಭಾಚಾರ, ಸ್ವಾರ್ಥ ಮೊದಲಾದವುಗಳ ಬಗೆಗಿನ ವಿಡಂಬನೆ ಮತ್ತು ಉಪದೇಶ. |
| ಕಲಿಕಾ ಸಾಧನೆಗಳು | : | ಕೀರ್ತನೆಗಳ ಆಸ್ವಾದನ ಟಿಪ್ಪಣಿ, ಪ್ರಬಂಧ ರಚನೆ, ಕೀರ್ತನೆಗಳನ್ನು ಹಾಡುವುದು, ಅಂತರ್ಜಾಲವನ್ನು ಬಳಸಿ ಹೆಚ್ಚಿನ ಮಾಹಿತಿ ಸಂಗ್ರಹ, ಕೀರ್ತನೆಗಳ ಸಂಗ್ರಹ. |
| ಆಶಯಗಳು | : | ಕರ್ತವ್ಯ ನಿಷ್ಠೆ, ಮಾಡುವ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕತೆ, ಎಲ್ಲರಲ್ಲೂ ಸ್ನೇಹ, ತಂದೆತಾಯಿಯರ ಮೇಲಿನ ಗೌರವ ಪತಿ–ಪತ್ನಿಯರ ಅನ್ಯೋನ್ಯ ಸಂಬಂಧ, ಶುದ್ಧ ಭಕ್ತಿ ಇವುಗಳನ್ನು ತಿಳಿದುಕೊಳ್ಳುವುದು. |
| ನೈಪುಣ್ಯಗಳು | : | ಕೀರ್ತನೆಗಳನ್ನು ಆಸ್ವಾದಿಸುವ, ಟಿಪ್ಪಣಿ ಬರೆಯುವ, ಹಾಡುವ, ಅಂತರ್ಜಾಲ ಬಳಸುವ ಸಾಮರ್ಥ್ಯ. |
| ಭಾಷಾ ಅಂಶಗಳು | : | ಉಚಿತ ಪದ ಪ್ರಯೋಗ, ಪ್ರಾಸ, ಸಂಗೀತಕ್ಕೆ ಹೊಂದುವ ಭಾಷೆಯ ಬಳಕೆಗಳನ್ನು ತಿಳಿದುಕೊಳ್ಳುವುದು. |
| ವ್ಯಾವಹಾರಿಕ ರೂಪ | : | ಆಸ್ವಾದನಾ ಟಿಪ್ಪಣಿ, ಪ್ರಬಂಧ, ಲೇಖನ, ಸಂಕಲನ. |
| ಮೌಲ್ಯ ಮನೋಭಾವಗಳು | : | ಸತ್ಯವನ್ನು ನುಡಿಯುವುದು, ಪ್ರಾಮಾಣಿಕತೆ, ಪರೋಪಕಾರ, ಶುದ್ಧ ಭಕ್ತಿ, ತಂದೆ–ತಾಯಿಯರನ್ನು ಗೌರವಿಸುವುದು, ಪತಿ–ಪತ್ನಿ ಅನೋನ್ಯ ಸಂಬಂಧ, ಸತ್ಕಾರ ಇತ್ಯಾದಿಗಳ ಬಗೆಗಿನ ಮನೋಭಾವ ರೂಪೀಕರಣ. |
| ನಿರೀಕ್ಷಿಸುವ ಉತ್ಪನ್ನಗಳು | : | ಟಿಪ್ಪಣಿ, ಪ್ರಬಂಧ, ಸಂಗ್ರಹ, ಹಾಡಿನ ಧ್ವನಿ ಮುದ್ರಿಕೆ. |
| ಕಲಿಕಾ ಸಾಮಾಗ್ರಿಗಳು | : | ಪಠ್ಯಪುಸ್ತಕ, ಧ್ವನಿಸುರುಳಿ, ಪರಾಮರ್ಶನ ಗ್ರಂಥ, ಸಾಕ್ಷ್ಯಚಿತ್ರ. |

| **ಪ್ರಕ್ರಿಯೆ / ಚಟುವಟಿಕೆ** | **ಮೌಲ್ಯಮಾಪನ** |
|---|---|
| • ಧ್ವನಿ ಸುರುಳಿಯನ್ನು ಕೇಳಿಸುವುದು. | |
| • ಪೂರ್ವಜ್ಞಾನದ ಪ್ರಶ್ನೆ ಕೇಳಿ ಅರಿತುಕೊಂಡು ಹೆಚ್ಚಿನ ವಿವರ ತಿಳಿಸುವುದು. | ಪೂರ್ವಜ್ಞಾನ |
| • ಪುರಂದರದಾಸರ ಪರಿಚಯ ಮಾಡಿಸುವುದು. | ಹಾಡುವ ರೀತಿ, ತಾಳ, ಭಾವ ಇತ್ಯಾದಿ |
| • ವಿದ್ಯಾರ್ಥಿಗಳಿಂದ ಹಾಡಿಸುವುದು. | |
| • ಅಧ್ಯಾಪಕರು ಹಾಡುವುದು. | |
| • ಪ್ರಾಸವನ್ನು ಗುರುತಿಸಲು ಹೇಳುವುದು. | ಪಾಲ್ಗೊಳ್ಳುವಿಕೆ, ಬರೆದ ಲೇಖನ |
| • ಇತರ ಕೆಲವು ಕೀರ್ತನೆಗಳನ್ನು ನೀಡಿ ತುಲನಾತ್ಮಕ ಅಧ್ಯಯನ ನಡೆಸುವುದು, ಲೇಖನ ಬರೆಸುವುದು. | |
| • ಕೀರ್ತನೆಗಳ ಆಶಯವನ್ನು ಬರೆಸುವುದು. | ಆಶಯ ಬರಹ |
| • ಕೀರ್ತನ ಗೋಷ್ಠಿಯನ್ನು ಏರ್ಪಡಿಸುವುದು. | ಪಾಲ್ಗೊಳ್ಳುವಿಕೆ |
| • ಕೀರ್ತನೆಗಳ ಹುಟ್ಟು, ಬೆಳವಣಿಗೆ, ಮಹತ್ವಗಳ ಕುರಿತು ಲೇಖನ ಬರೆಸುವುದು. | ಲೇಖನ |
| • ಕೀರ್ತನೆಗಳನ್ನು ಸಂಗ್ರಹಿಸಿ ಸಂಕಲನ ತಯಾರಿಸುವುದು. | ಸಂಕಲನ |

ಪ್ರಾಂಶುಪಾಲರ ಸಹಿ　　　　　　　　　　ಅಧ್ಯಾಪಕರ ಸಹಿ

# ಪ್ರತಿಫಲನ (Reflection)

- ನಾನು ಗುರುತಿಸಿಕೊಂಡುದು, ಅರ್ಥಮಾಡಿಕೊಂಡುದು

- 
- 
- 
- 

- ಮುಂದುವರಿದ ಚಟುವಟಿಕೆಗಳು ಹಾಗೂ ಪರಿಹಾರೋಪಾಯಗಳು.

- 
- 
- 
- 
- 

- ಪ್ರತಿಫಲನಾತ್ಮಕ ಟಿಪ್ಪಣಿಯ ಅಗತ್ಯವೇನು?

- ಪ್ರತಿವಾರ ಎಸ್.ಆರ್.ಜಿ. ಸಬ್ಜೆಕ್ಟ್ ಕೌನ್ಸಿಲ್ (ವಿಷಯ ಸಮಿತಿ) ಸಭೆಯಲ್ಲಿ ಮಂಡಿಸಲು.
- ಮುಂದುವರಿದ ಯೋಜನೆಗೆ ದಿಕ್ಸೂಚಿಯಾಗಲು.
- ಪ್ರತಿ ಹಂತದ ನಿರಂತರ ಮೌಲ್ಯಮಾಪನದ ಕ್ರೋಢೀಕರಣಕ್ಕೆ.

# ಬೇವು ಬೆಲ್ಲದೊಳಿಡಲೇನು ಫಲ

– ಪುರಂದರದಾಸ

## ಪ್ರವೇಶ

ಕೀರ್ತನೆಗಳನ್ನು ವಿದ್ಯಾರ್ಥಿಗಳು ಈಗಾಗಲೇ ಆಲಿಸಿರುತ್ತಾರೆ. ಅವರಿಗೆ ನೆನಪಿರುವ ಕೀರ್ತನೆಗಳನ್ನು ಹಾಡಲು ಹೇಳುವುದು. ಅವರು ಹಾಡುವರು.ಅವುಗಳನ್ನು ರಚಿಸಿದವರ ಹೆಸರನ್ನು ವಿದ್ಯಾರ್ಥಿಗಳು ಹೇಳಲಿ. ಬಳಿಕ ಪುರಂದರ ದಾಸರ ಕುರಿತು ವಿದ್ಯಾರ್ಥಿಗಳು ತಿಳಿದಿರುವ ವಿಷಯಗಳನ್ನು ಹೇಳಲು ಸೂಚಿಸುವುದು. ತಿಳಿದಿರುವವರು ಹೇಳುವರು. ಬಳಿಕ ಅಧ್ಯಾಪಕರು ಪುರಂದರದಾಸರ ಸಂಕ್ಷಿಪ್ತ ಪರಿಚಯವನ್ನು ನೀಡುವುದು.

## ಕವಿ ಪರಿಚಯ

'ದಾಸರೆಂದರೆ ಪುರಂದರ ದಾಸರಯ್ಯ' ಎಂದು ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಕೆಯನ್ನು ಪಡೆದ ಪುರಂದರದಾಸರು ಜ್ಞಾನ, ಭಕ್ತಿ, ವೈರಾಗ್ಯಗಳಲ್ಲಿ ಪರಾಕಾಷ್ಠೆಯನ್ನು ತಲುಪಿದವರು. ಜಾತಿ–ಮತಗಳ ಮೇರೆಯನ್ನು ಮೀರಿ ಮಾನವ ಜನ್ಮ ದೊಡ್ಡದು ಎಂದು ಸಾರಿದವರು. ಇವರ ಕೀರ್ತನೆಗಳಲ್ಲಿ ಕಂಡು ಬರುವ ನಿತ್ಯ ಜೀವನದ ಉಪಮೆಗಳು, ಚಿತ್ರಗಳು ಗಮನ ಸೆಳೆಯುತ್ತವೆ. ಇವರು ಹರಿದಾಸ ಪರಂಪರೆಯ ದಾಸ ಶ್ರೇಷ್ಠರಲ್ಲಿ ಒಬ್ಬರು. ಪುರಂದರ ವಿಠಲ ಎಂಬುದು ಇವರ ಅಂಕಿತವಾಗಿದೆ. ಅಂತರಂಗವು ಶುದ್ಧವಾಗಿರದಿದ್ದರೆ ನಾವು ಮಾಡುವ ಆಚರಣೆಗಳು ಬೇವನ್ನು ಬೆಲ್ಲದಲ್ಲಿಟ್ಟಂತೆ, ಹಾವಿಗೆ ಹಾಲೆರೆದಂತೆ ನಿಷ್ಫಲವಾಗುತ್ತದೆ ಎಂಬುದನ್ನು ವಿವಿಧ ಉದಾಹರಣೆಗಳ ಮೂಲಕ ಈ ಕೀರ್ತನೆಯ ನಿರೂಪಿಸಿದ್ದಾರೆ.

ಕೀರ್ತನೆಗಳನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು, ಹಾಡುವಾಗ ಉಚ್ಚಾರಣೆಯಲ್ಲಿ ತಪ್ಪು, ಪದಗಳಲ್ಲಿನ ನಿಲುಗಡೆಯಲ್ಲಿನ ತಪ್ಪು, ಸ್ವರಭಾರದ ವ್ಯತ್ಯಾಸಗಳು ಕಾಣಿಸಿದರೆ ತಿದ್ದುವುದು. ಅವರು ಹಾಡಿದ ಬಳಿಕ ಹಾಡುವ ಸರಿಯಾದ ರೀತಿಯನ್ನು ತಿಳಿದುಕೊಳ್ಳಲು ಅಡಕ ಮುದ್ರಿಕೆಯ ಮೂಲಕ ಕೀರ್ತನೆಯನ್ನು ಕೇಳಿಸುವುದು. ವಿದ್ಯಾರ್ಥಿಗಳು ಗಮನವಿರಿಸಿ ಕೇಳುವರು. DVD ಯ ಮೂಲಕ ಹಾಡನ್ನು ಕೇಳಿದ ವಿದ್ಯಾರ್ಥಿಗಳಿಗೆ ತಾವೂ ಆ ರೀತಿ ಹಾಡುವ ಮನಸ್ಸಾಗಬಹುದು. ಅವರಿಂದ ಪುನಃ ಹಾಡಿಸುವುದು.

## ಚಟುವಟಿಕೆಗಳು

### ಪದವಿಂಗಡಣೆ

ಪದ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವುದಕ್ಕಾಗಿ ಪದಗಳನ್ನು ವಿಂಗಡಿಸಿ ಹೇಳಲು ಬಳಿಕ ಅದನ್ನು ಬರೆಯಲು ಸೂಚಿಸುವುದು. ತಪ್ಪಿದರೆ ಅಧ್ಯಾಪಕರು ಸರಿಪಡಿಸಿಕೊಳ್ಳುವುದು.

| | | |
|---|---|---|
| ಬೆಲ್ಲದೊಳು + ಇಡಲು | = | ಬೆಲ್ಲದೊಳಿಡಲು |
| ಹಾಲು + ಎರೆದು + ಏನು | = | ಹಾಲೆರೆದೇನು |
| ಸಟೆಯನ್ನು + ಆಡುವ | = | ಸಟೆಯನ್ನಾಡುವ |

| | | |
|---|---|---|
| ಗೀತೆಯನು + ಓದಿದರೆ + ಏನು | = | ಗೀತೆಯನೋದಿದರೇನು |
| ಅತಿಥಿಗಳ + ಎಡೆಯಲಿ | = | ಅತಿಥಿಗಳೆಡೆಯಲಿ |
| ಮಾಡಿದರೆ + ಏನು | = | ಮಾಡಿದರೇನು |

## ಪ್ರಾಸ

ವಿದ್ಯಾರ್ಥಿಗಳಲ್ಲಿ ಪ್ರಾಸದ ಕುರಿತು ತಿಳಿದಿರುವಿರೇ? ಎಂದು ಪ್ರಶ್ನಿಸುವುದು. ತಿಳಿದಿರುವವರು ಹೇಳಲಿ. ಬಳಿಕ ಅಧ್ಯಾಪಕರು ಪ್ರಾಸದ ನಿಯಮವನ್ನು ತಿಳಿಸುವುದು. ಕೀರ್ತನೆಯಲ್ಲಿ ಬಂದಿರುವ ಪ್ರಾಸವು ಯಾವುದೆಂದು ಪ್ರಶ್ನಿಸುವುದು. ಅದನ್ನು ಅವರು ಗುರುತಿಸಲು ಹೇಳಲಿ. ಬಳಿಕ ಪುಸ್ತಕದಲ್ಲಿ ಬರೆಯಲಿ.

### ಆದಿ ಪ್ರಾಸ

| | | |
|---|---|---|
| ಉದಾ: | ಬೇವು ........................................ | ಕುಟಿಲವ ................................ |
| | ಹಾವು ........................................ | ಪತನೆಯ ............................... |
| | ಕಪಟತನದಲಿ ............................... | ಪತಿಗಳ ................................. |
| | ಜಪವನು ..................................... | ವ್ರತಗಳ ................................. |

ಅರು, ಅಂದಿರು, ಗಳು ಮೊದಲಾದ ಬಹುವಚನ ಪ್ರತ್ಯಯಗಳು ಕೀರ್ತನೆಯಲ್ಲಿ ಬಂದಿವೆ. ಅವುಗಳನ್ನು ಗುರುತಿಸಲು ಹೇಳುವುದು. ಪುಸ್ತಕದಲ್ಲಿ ಬರೆದುಕೊಳ್ಳುವುದು. ಮನುಜರು, ಸತಿಯರು. ಗುಣಂಗಳು ಇತ್ಯಾದಿ.

## ಆಶಯ ಬರೆಸುವುದು

ವಿದ್ಯಾರ್ಥಿಗಳನ್ನು ಐದು ಗುಂಪುಗಳಾಗಿ ವಿಂಗಡಿಸಿ ಕೀರ್ತನೆಯ ಒಂದೊಂದು ಪದ್ಯವನ್ನು ಒಂದೊಂದು ಗುಂಪಿಗೆ ನೀಡಿ ಅದರ ಆಶಯವನ್ನು ಬರೆಸುವುದು. ಬರೆದ ಆಶಯವನ್ನು ಪ್ರತಿಗುಂಪಿನಲ್ಲಿ ಒಬ್ಬರು ಓದಿ ಹೇಳಲಿ. ಉಳಿದ ಗುಂಪಿನವರು ಅದನ್ನು ಆಲಿಸಿ ಅದರ ಕುರಿತು ತಮ್ಮ ಅಭಿಪ್ರಾಯವನ್ನು ಸೂಚಿಸಲಿ. ಅಗತ್ಯವಿದ್ದರೆ ತಿದ್ದುಪಡಿ ಮಾಡಲಿ. ಬಳಿಕ ಒಟ್ಟು ಕೀರ್ತನೆಯ ಆಶಯವನ್ನು ಎಲ್ಲ ವಿದ್ಯಾರ್ಥಿಗಳೂ ಪುಸ್ತಕದಲ್ಲಿ ಬರೆಯುವಂತೆ ಅಧ್ಯಾಪಕರು ಸೂಚಿಸುವುದು.

## ಆಸ್ವಾದನಾ ಟಿಪ್ಪಣಿ

ಕೀರ್ತನೆಯ ಆಸ್ವಾದನ ಟಿಪ್ಪಣಿಯನ್ನು ಬರೆಯುವುದು. ಅದನ್ನು ಅವರು ತರಗತಿಯಲ್ಲಿ ಮಂಡಿಸಲಿ. ಮಂಡನೆಯ ಬಳಿಕ ತಪ್ಪಿರುವಲ್ಲಿ ತಿದ್ದಿ ಉತ್ತಮಪಡಿಸಲಿ.

ಕೀರ್ತನೆಯಲ್ಲಿ ಹೇಳಿರುವ ವಿಚಾರಗಳನ್ನು ವಿದ್ಯಾರ್ಥಿಗಳೂ ಇಂದಿನ ಸಮಾಜದಲ್ಲಿ ಕಂಡಿರಬಹುದು. ಅದನ್ನು ಪ್ರಬಂಧ ರೂಪದಲ್ಲಿ ಬರೆಯಲು ಸೂಚಿಸುವುದು. ಸಮಾಜದ ಸಮಸ್ಯೆಗಳಿಗೆ ಪರಿಹಾರವನ್ನು ಅದರಲ್ಲಿ ಸೂಚಿಸಲಿ. ಪ್ರಬಂಧವನ್ನು ತರಗತಿಯಲ್ಲಿ ಓದಲಿ.

ಕೀರ್ತನೆಯನ್ನು ಓದಿದ ವಿದ್ಯಾರ್ಥಿಗಳು ಕೀರ್ತನೆಗಳು ತಮ್ಮ ಮನಸ್ಸಿನ ಮೇಲೆ ಬೀರಿದ ಪ್ರಭಾವವನ್ನು ಹೇಳಲಿ.

**ಸಾರಾಂಶ**

ಬೇವು ಕಹಿಯಾದ ವಸ್ತು. ಅದಕ್ಕೆ ಎಷ್ಟು ಬೆಲ್ಲವನ್ನು ಸೇರಿಸಿದರೂ ಅದು ಬೆಲ್ಲವನ್ನು ಹೀರಿ ತನ್ನ ಕಹಿಯನ್ನು ಕಳಕೊಳ್ಳುವುದಿಲ್ಲ. ಹಾವಿಗೆ ಹಾಲನ್ನು ಎರೆದರೂ ಅದು ಹಾಲನ್ನು ನೀಡಿದವರನ್ನೇ ಕಚ್ಚ ಬಹುದು. ನಾವು ಸ್ವತಃ ಒಳ್ಳೆಯರಾಗದೆ ಇರುವವರೆಗೆ ಬೇರೆ ಯಾವ ಕಾರ್ಯಗಳನ್ನು ಮಾಡಿಯೂ ಪ್ರಯೋಜನವಿಲ್ಲವೆಂಬುದನ್ನು ದಾಸರು ಸ್ಪಷ್ಟಪಡಿಸುತ್ತಾರೆ. ಸುಳ್ಳು, ಮೋಸ ಮೊದಲಾದವುಗಳನ್ನು ಅಂತರಂಗದಲ್ಲಿ ತುಂಬಿಕೊಂಡು ಹೊರಗಡೆ ಮಂತ್ರಗಳನ್ನು ಪಠಿಸಿ ಪೂಜೆ ಮಾಡುವ ನಟನೆ ಮಾಡಿದರೆ ಯಾವ ಪ್ರಯೋಜನವೂ ಇಲ್ಲವೆಂದು ಹೇಳುತ್ತಾರೆ.

ಮನಸ್ಸಿನಲ್ಲಿ ಕೋಪವನ್ನು ಇರಿಸಿಕೊಂಡು, ಜನರಿಗೆ ಕಿರುಕುಳ ಕೊಡುತ್ತಾ ಇರುವವರು ದೇವರ ಜಪ, ತಪ ಮಾಡಿ ಒಳಿತನ್ನು ಬಯಸಿ ಪ್ರಯೋಜನವಿಲ್ಲ. ಮೊದಲಿಗೆ ತಾವು ಒಳ್ಳೆಯಗುಣಗಳನ್ನು ಬೆಳೆಸಿಕೊಳ್ಳಬೇಕು ಆಗ ತಾನಾಗಿಯೇ ಜೀವನದಲ್ಲಿ ಸಂತೃಪ್ತಿ ಪಡೆಯಬಹುದು. ನಮ್ಮ ಹುಟ್ಟಿಗೆ ಕಾರಣರಾಗಿ, ನಮ್ಮನ್ನು ಸಾಕಿ ಸಲಹಿದ ತಂದೆ ತಾಯಂದಿರಿಗೆ ನಾವು ಯಾವತ್ತೂ ಋಣಿಯಾಗಿರಬೇಕು. ವೃದ್ಧಾಪ್ಯದಲ್ಲಿ  ಅವರನ್ನು ಸಂರಕ್ಷಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಅದನ್ನು ಮಾಡದೆ ಪುಣ್ಯ ಸಂಪಾದನೆಗಾಗಿ ಯಾವ ತೀರ್ಥಯಾತ್ರೆಯನ್ನು ಕೈಗೊಂಡರೂ ಅದರಿಂದ ಫಲ ದೊರಕದು. ಇತರರಿಗೆ ಹಿಂಸೆಯನ್ನು ಮಾಡುವ ಗುಣವನ್ನು ಇರಿಸಿಕೊಂಡು ದಿನಾವೂ ಭಗವದ್ಗೀತೆಯನ್ನು ಅಥವಾ ಯಾವುದೇ ಧರ್ಮದ ಗ್ರಂಥವನ್ನು ಓದಿದರೆ ಅದರಿಂದಲೂ ಯಾವುದೇ ಉಪಯೋಗವಾಗದು.

ಸತಿ ಪತಿಯರು ತಮ್ಮ ತಮ್ಮ ಕರ್ತವ್ಯಗಳನ್ನು ಅರಿತುಕೊಂಡು ಒಂದಾಗಿ ಹೊಂದಿಕೂಂಡು ಜೀವನ ನಡೆಸಬೇಕು. ಆಗ ಜೀವನ ಸುಂದರವಾಗಿ ನೆಮ್ಮದಿಯಿಂದ ಸಾಗಬಹುದು. ಬದಲಿಗೆ ಒಂದೆಡೆ ಪತಿಯನ್ನೇ ಸದಾ ದೂರುತ್ತಾ ಇನ್ನೊಂದೆಡೆ ದೇವರ ವ್ರತಗಳನ್ನು ಮಾಡುವ ಸತಿಯರಿಗೆ ವ್ರತಗಳ ಫಲ ದೊರಕದು. ಇಂದಿನ ಸಮಾಜದಲ್ಲಿ ಕೆಲವೆಡೆ ದಾಂಪತ್ಯದಲ್ಲಿ ಉಂಟಾಗುತ್ತಿರುವ ಬಿರುಕನ್ನು ಇಲ್ಲಿ ಗಮನಿಸಬಹುದು. ಅದೇ ರೀತಿಯಲ್ಲಿ ಅತಿಥಿಗಳನ್ನು ಗೌರವಾದರಗಳಿಂದ ನೋಡಬೇಕಾದುದು ನಮ್ಮ ಧರ್ಮ. ಹಾಗೆ ಮಾಡದೆ ಅವರಲ್ಲೂ ಭೇದ–ಭಾವ ಮಾಡಿಕೊಂಡು ಒಳಿತನ್ನು ಬಯಸಿದರೆ ಅದು ಫಲ ನೀಡದು.

ಗಂಗಾ ಸ್ನಾನ ಬಹುಪುಣ್ಯದಾಯಕವೆಂದು ಗಂಗಾ ನದಿಯತ್ತ ಹೋಗಿ ಸ್ನಾನ ಮಾಡಿ ಬರುವ ಸಂಪ್ರದಾಯ ನಮ್ಮಲ್ಲಿದೆ. ಆದರೆ ನಮ್ಮ ಕೆಟ್ಟಗುಣಗಳನ್ನು ತ್ಯಜಿಸದೆ ಗಂಗಾಸ್ನಾನ ಮಾಡಿದರೆ ಫಲವಿಲ್ಲ. ಮೌನ ವ್ರತಾಚರಣೆ ಮಾಡುವಾಗಲೂ ಮನಸ್ಸಲ್ಲಿ ದೇವರ ಧ್ಯಾನವೊಂದನ್ನೇ ಮಾಡಬೇಕೇ ಹೊರತು ಬೇರೆಡೆ ಗಮನ ಹರಿಸಿದರೆ ಅದರಿಂದಲೂ ಉತ್ತಮ ಫಲ ದೊರೆಯಲಾರದು.

ಈ ರೀತಿಯಲ್ಲಿ ಪುರಂದರದಾಸರು ಸಮಾಜದಲ್ಲಿ ಕಾಣಿಸುತ್ತಿರುವ ವಿಚಾರಗಳನ್ನು ಉದಾಹರಿಸುತ್ತಾ ಮನುಷ್ಯರು ಹೇಗೆ ಸಂತೋಷ, ಸಮಾಧಾನದಿಂದ ಸುಂದರ ಜೀವನ ನಡೆಸಬಹುದು ಎಂಬುದನ್ನು ತಮ್ಮ ಕೀರ್ತನೆಯ ಮೂಲಕ ತಿಳಿಸಿದ್ದಾರೆ. ಅವರ ಮಾತುಗಳು ಇಂದಿನ ಸಮಾಜಕ್ಕೂ ಸಲ್ಲುವುದಾಗಿದೆ.

# ಸತ್ಯವಂತರ ಸಂಗವಿರಲು ತೀರ್ಥವೇತಕೆ

– ಕನಕದಾಸ

## ಪ್ರವೇಶ

ಕೀರ್ತನೆಯ ಪರಿಚಯವನ್ನು ವಿದ್ಯಾರ್ಥಿಗಳು ಮಾಡಿರುತ್ತಾರೆ. ಪುರಂದರದಾಸರ ಸಮಕಾಲೀನರೂ ಪ್ರಸಿದ್ಧರೂ ಆಗಿರುವ ಕನಕದಾಸರ ಪರಿಚಯವನ್ನು ಇಲ್ಲಿ ಅಧ್ಯಾಪಕರು ಮಾಡಿಸುವುದು.

## ಕವಿಪರಿಚಯ

ಕನಕದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಇವರು ಕೀರ್ತನೆಗಳನ್ನು ಮಾತ್ರವಲ್ಲದೆ ಇತರ ಕಾವ್ಯಗಳನ್ನೂ ಬರೆದವರು. ಪರಂಪರಾಗತ ಶ್ರದ್ಧೆ, ಆಚಾರಗಳನ್ನು ಮಾನವೀಯ ಹಿನ್ನೆಲೆಯಲ್ಲಿ ತಮ್ಮ ಕೀರ್ತನೆಗಳಲ್ಲಿ ಸಮಾಜ ನೀತಿಬೋಧೆ ಮಾಡಿದವರು. ಈ ಕೀರ್ತನೆಯಲ್ಲಿ ಪರೋಪಕಾರ, ಆತ್ಮವಿಮರ್ಶೆ, ನೀತಿ ಬೋಧೆ ಇತ್ಯಾದಿ ವಿಚಾರಗಳನ್ನು ನಿರೂಪಿಸಲಾಗಿದೆ. ಕಾಗಿನೆಲೆಯಾದಿ ಕೇಶವ ಇವರ ಕೀರ್ತನೆಗಳ ಅಂಕಿತವಾಗಿದೆ

ಈ ಕೀರ್ತನೆಯನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು. ತಪ್ಪಿದ್ದಲ್ಲಿ ಅಧ್ಯಾಪಕರು ಅಗತ್ಯವಾದ ಸಲಹೆಯನ್ನು ನೀಡುವುದು. ಕೀರ್ತನೆಯನ್ನು ಹಾಡಿದ, ಆಲಿಸಿದ ವಿದ್ಯಾರ್ಥಿಗಳಿಗೆ ಕೀರ್ತನೆಯಲ್ಲಿ ಬಂದಿರುವ ವಿಷಯ ಸ್ವಲ್ಪ ಮಟ್ಟಿಗೆ ಅರ್ಥವಾಗಿರುತ್ತದೆ. ಕೀರ್ತನೆಯ ವಸ್ತುವಿನ ಕುರಿತು ಅವರು ಹೇಳಲಿ.

ಕೀರ್ತನೆಯಲ್ಲಿನ ಪದಗಳ ಅರ್ಥವನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. ಅವರು ತಿಳಿಯದಿರುವ ಶಬ್ದಗಳ ಅರ್ಥಗಳನ್ನು ಅಧ್ಯಾಪಕರು ತಿಳಿಸುವುದು. ಅವುಗಳನ್ನು ಎಲ್ಲರೂ ಪುಸ್ತಕದಲ್ಲಿ ಬರೆಯಲಿ.

## ಚಟುವಟಿಕೆಗಳು

### ಪದಗಳ ಅರ್ಥ

| | | |
|---|---|---|
| ಅರಿವು | – | ತಿಳಿವು |
| ಪರಹಿತ | – | ಇತರರ ಸಹಾಯಕ್ಕೆ, ಒಳಿತಿಗಾಗಿ |
| ಭೀತನಾಗಿ | – | ಭಯಗೊಂಡು, ಹೆದರಿಕೊಂಡು |
| ಇದಿರು | – | ಎದುರು, ವಿರುದ್ಧವಾಗಿ |
| ಮಾನಹೀನ | – | ಮರ್ಯಾದೆ ಕಳಕೊಂಡು |
| ತನು | – | ಶರೀರ |

## ಪದವಿಂಗಡಣೆ

ಪದವಿಂಗಡಣೆ ಮಾಡಿ ಹೇಳಲು ಸೂಚಿಸುವುದು. ಅವುಗಳನ್ನು ಪುಸ್ತಕದಲ್ಲಿ ಬರೆಸುವುದು.

ಉದಾ:

| | | | | | | | | | |
|---|---|---|---|---|---|---|---|---|---|
| ಅರಿವು | + | ಅದು | + | ಏತಕೆ | | | = | ಅರಿವದೇತಕೆ |
| ಪರರ | + | ಹಿತ | + | ಅರ್ಥಕೆ | + | ಇಲ್ಲದವನ | = | ಪರಹಿತಾರ್ಥಕ್ಕಿಲ್ಲದವನ |
| ಜನುಮ | + | ಏತಕೆ | | | | | = | ಜನುಮವೇತಕೆ |
| ಮಕ್ಕಳು | + | ಏತಕೆ | | | | | = | ಮಕ್ಕಳೇತಕೆ |
| ಎಡೆಯನು | + | ಇಕ್ಕದ | | | | | = | ಎಡೆಯನಿಕ್ಕದ |
| ಊಟವು | + | ಏತಕೆ | | | | | = | ಊಟವೇತಕೆ |
| ಸುಗುಣನು | + | ಏತಕೆ | | | | | = | ಸುಗುಣನೇತಕೆ |
| ಪರರಿಗೆ | + | ಇಕ್ಕದ | | | | | = | ಪರರಿಗಿಕ್ಕದ |
| ಧನವು | + | ಇದ್ದು | + | ಏತಕೆ | | | = | ಧನವಿದ್ದೇತಕೆ |
| ಬಳಗ | + | ಬೆರೆಸಿ | | | | | = | ಬಳಗವೆರೆಸಿ |
| ಭಾಗ್ಯವು | + | ಏತಕೆ | | | | | = | ಭಾಗ್ಯವೇತಕೆ |
| ತನುವು | + | ಇದ್ದು | + | ಏತಕೆ | | | = | ತನುವಿದ್ದೇತಕೆ |
| ಸನ್ನೆ | + | ಅರಿತು | | | | | = | ಸನ್ನೆಯರಿತು |

## ಆಶಯ ಬರೆಸುವುದು

ಕೀರ್ತನೆಯ ಒಂದೊಂದು ಪದ್ಯವನ್ನು ಒಬ್ಬೊಬ್ಬ ವಿದ್ಯಾರ್ಥಿಯಿಂದ ಓದಿಸುವುದು ಬಳಿಕ ಅದರ ಆಶಯವನ್ನು ಅವರು ಹೇಳಲಿ. ಉಳಿದ ವಿದ್ಯಾರ್ಥಿಗಳು ಅದನ್ನು ಗಮನವಿಟ್ಟು ಕೇಳಲಿ. ನಂತರ ತಮ್ಮ ಅಭಿಪ್ರಾಯವನ್ನು ಹೇಳಲಿ. ಅಧ್ಯಾಪಕರು ಸೂಕ್ತವಾದ ಸಲಹೆ ನೀಡಿ ಅವುಗಳನ್ನು ಕ್ರೋಡೀಕರಿಸುವುದು. ಎಲ್ಲ ವಿದ್ಯಾರ್ಥಿಗಳೂ ಆಶಯವನ್ನು ಪುಸ್ತಕದಲ್ಲಿ ಬರೆದುಕೊಳ್ಳಲಿ.

ಪ್ರಾಸ ಗುರುತಿಸುವುದು: ಈ ಕೀರ್ತನೆಯಲ್ಲಿ ಆದಿಪ್ರಾಸ ಹಾಗು ಅಂತ್ಯ ಪ್ರಾಸಗಳು ಬಂದಿವೆ. ಅವುಗಳನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಹೇಳುವುದು. ಬಳಿಕ ಪುಸ್ತಕದಲ್ಲಿ ಬರೆದುಕೊಳ್ಳಲಿ.

| **ಆದಿಪ್ರಾಸ** | **ಅಂತ್ಯಪ್ರಾಸ** |
|---|---|
| ಸತ್ಯ | ವೇತಕೆ |
| ನಿತ್ಯ | ಏತಕೆ |

## ಪತ್ರಿಕಾ ಲೇಖನ ಬರೆಸುವುದು

ಕೀರ್ತನೆಯಲ್ಲಿ ಮೂಡಿಬಂದಿರುವ ಸಾಮಾಜಿಕ ವಿಡಂಬನೆಯ ಕುರಿತು ವಿಮರ್ಶಾತ್ಮಕ ಲೇಖನ ಬರೆಯಲು ಸೂಚಿಸುವುದು. ಬರೆದ ಲೇಖನವನ್ನು ತರಗತಿಯಲ್ಲಿ ಓದಲಿ. ಉತ್ತಮ ಪಡಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲಿ.

## ಲೇಖನ

ಜನರಲ್ಲಿ ಪರೋಪಕಾರ ಮನೋಭಾವವನ್ನು ಬೆಳೆಸಲು ಸಹಕಾರಿಯಾಗುವ ರೀತಿಯಲ್ಲಿ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನವೊಂದನ್ನು ವಿದ್ಯಾರ್ಥಿಗಳಿಂದ ಬರೆಸುವುದು. ಅಧ್ಯಾಪಕರು ಸೂಕ್ತವಾದ ಮಾರ್ಗದರ್ಶನ ನೀಡುವುದು.

## ಟಿಪ್ಪಣಿ

ಕೀರ್ತನೆಗಳಲ್ಲಿ ಬಂದಿರುವ ಉತ್ತಮವಾದ ಅಂಶಗಳನ್ನು ದೈನಂದಿನ ಜೀವನದಲ್ಲಿ ಹೇಗೆ ಅಳವಡಿಸಬಹುದು ಎಂಬುದನ್ನು ಕುರಿತು ಟಿಪ್ಪಣಿ ಬರೆಯಲು ಹೇಳುವುದು. ವಿದ್ಯಾರ್ಥಿಗಳು ತರಗತಿಯಲ್ಲಿ ಓದಲಿ.

## ತೌಲನಿಕ ಲೇಖನ

ಪದ್ಯದಲ್ಲಿ ನೀಡಲಾದ ಪುರಂದರ ದಾಸರ ಹಾಗೂ ಕನಕದಾಸರ ಕೀರ್ತನೆಗಳನ್ನು ಪರಸ್ಪರ ಹೋಲಿಸಿ ತುಲನಾತ್ಮಕ ಲೇಖನ ಬರೆಸುವುದು. ಬರೆದ ಲೇಖವನ್ನು ತರಗತಿಯಲ್ಲಿ ಮಂಡಿಸಲಿ.

ICT ಸಹಕಾರದಿಂದ ಕೀರ್ತನಕಾರರ ಕುರಿತು ಬಂದಿರುವ ಸಾಕ್ಷ್ಯಚಿತ್ರ ಅಥವಾ ಸಿನಿಮಾವನ್ನು ಪ್ರದರ್ಶಿಸುವುದು. ಅದನ್ನು ನೋಡಿದ ವಿದ್ಯಾರ್ಥಿಗಳು ಗ್ರಂಥಾಲಯದ ಸಹಕಾರವನ್ನು ಪಡೆದು ಕೀರ್ತನಕಾರರ ವ್ಯಕ್ತಿಚಿತ್ರಣವನ್ನು ಬರೆಯಲಿ. ತರಗತಿಯಲ್ಲಿ ಮಂಡಿಸಲಿ.

## ಸಾರಾಂಶ

ಮನುಷ್ಯನು ಒಳ್ಳೆಯವರ ಸಂಗದಲ್ಲಿದ್ದರೆ ಎಂದಿಗೂ ಭಯಪಡಬೇಕಾದ ಅಗತ್ಯವಿಲ್ಲ. ದೇವರ ತೀರ್ಥದ ಅಗತ್ಯವಿಲ್ಲ ಎಂಬುದನ್ನು ಕೀರ್ತನೆಯ ಪಲ್ಲವಿಯಲ್ಲಿ ತಿಳಿಸುತ್ತಾ ಪ್ರತಿಯೊಬ್ಬರೂ ತಮ್ಮತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲಿಸಬೇಕಾದುದು ಮುಖ್ಯ ಎನ್ನುತ್ತಾರೆ. ಗುರುಗಳ, ಹಿರಿಯರ ಸ್ಥಾನ ಮಾನಗಳನ್ನು ತಿಳಿಯದೆ, ಅವರನ್ನೂ ಗೌರವಿಸದವರು ಬೇರೆ ಏನನ್ನೂ ತಿಳಿದು ಪ್ರಯೋಜನವಿಲ್ಲ. ಸಂದರ್ಭ ಬಂದಾಗ ಪರರಿಗೆ ಸಹಾಯವನ್ನು ಮಾಡದ ನಮ್ಮ ಶರೀರವಿದ್ದೂ ಉಪಯೋಗವಿಲ್ಲ. ಈ ಭೂಮಿಯಲ್ಲಿ ನಮ್ಮನ್ನು ತಂದಿರುವ ದೇವರನ್ನು ಸ್ಮರಿಸದ ಜೀವನವೇ ವ್ಯರ್ಥ. ಹಾಗೆಯೇ ತನ್ನ ಬಳಿಗೆ ಸಹಾಯ ಬೇಡಿ ಬಂದವರನ್ನು ಸಂರಕ್ಷಿಸದಂತಹ ರಾಜನಿರುವುದೂ ನಿಷ್ಪ್ರಯೋಜಕ.

ಮಕ್ಕಳು ತಮ್ಮ ಹೆತ್ತವರ ಮಾತನ್ನು ಅನುಸರಿಸಿ ನಡೆಯಬೇಕು. ಅದು ಅವರ ಕರ್ತವ್ಯ. ಹಾಗೆ ಮಾಡದೆ ಗರ್ವದಿಂದ ವರ್ತಿಸುವ ಮಕ್ಕಳು ಇದ್ದೂ ಇಲ್ಲದಂತೆ. ಸೇವಕ / ಯೋಧನಾದವನು ಯಾವುದೇ ಸಂದರ್ಭದಲ್ಲಿ ಹೆದರಿಕೊಳ್ಳಬಾರದು. ಅವನೇ ಭಯಗೊಂಡು ಓಡಿ ಬಂದರೆ ಅವನ ಅಗತ್ಯವಾದರೂ ಏನು? ಇನ್ನೊಬ್ಬರಿಗೆ ನಾವು ಯಾವಾಗಲೂ ಆಹಾರವನ್ನು ನೀಡುವುದಾದರೆ ಪ್ರೀತಿಯಿಂದ ನೀಡಬೇಕು. ಊಟವನ್ನು ಬಡಿಸಬೇಕು. ಹಾಗೆ ನೀಡದ ಊಟವು ಯೋಗ್ಯವಾದುದಲ್ಲ. ಅದರ ಫಲವೂ ದೊರೆಯಲಾರದು. ಹೆಣ್ಣೊಬ್ಬಳು ಸೋತು ನಮ್ಮ ಬಳಿಗೆ ಬಂದಾಗ ಅವಳಿಗೆ ಸಹಾಯ ಮಾಡದೆ ವಿರುದ್ದ ವಾಗಿ ವರ್ತಿಸಿದರೆ ಅಂಥವರನ್ನು ಗುಣವಂತರೆಂದು ಕರೆಯಲು ಕೂಡ ಸಾಧ್ಯವಿಲ್ಲ.

ನಮ್ಮಲ್ಲಿರುವ ಸಂಪತ್ತು ಸದುಪಯೋಗಗೊಳ್ಳಬೇಕು. ತಾನು ಅನುಭವಿಸಬೇಕು. ಅಗತ್ಯವಿರುವವರಿಗೆ ಧಾರಾಳವಾಗಿ ನೀಡಬೇಕು. ಅದನ್ನು ತಾನು ಸ್ವತಃ ಬಳಸದೆ, ಇತರರಿಗೂ ನೀಡದೆ ಇರಲು ಅದರಿಂದ ಪ್ರಯೋಜನವಿಲ್ಲ. ಮನುಷ್ಯರಾಗಿ ಇಲ್ಲಿ ಹುಟ್ಟಿ ಗೌರವವನ್ನೇ ಕಳಕೊಂಡು ಜೀವಿಸುವಂತಹ ಬದುಕಿಗೆ ಅರ್ಥವೇ ಇಲ್ಲ. ನಮ್ಮಲ್ಲಿನ ಕೊರತೆಯನ್ನೇ ಗಮನಿಸುವವರ ನಡುವೆ ನಾವು ಇರಬಾರದು. ನಮ್ಮ ಬಂಧು ಬಳಗದೊಂದಿಗೆ ಸೇರಿ ಸಂತೋಷದಿಂದ ಊಟಮಾಡಿ ಜೀವಿಸಲು ಬಯಸದವರಿಗೆ ಯಾವ ಭಾಗ್ಯ ಲಭಿಸಿದರೂ ವ್ಯರ್ಥ.

ತನ್ನ ಕುರಿತು ತಾನೇ ತಿಳಿದುಕೊಳ್ಳದವನು ಪ್ರೌಢನೆಂದು ಕರೆಯಿಸಿಕೊಳ್ಳಲು ಯೋಗ್ಯನಲ್ಲ. ಸರಿಯಾದ ಸಮಯದಲ್ಲಿ ಸ್ನಾನ–ಸಂಧ್ಯಾವಂದನೆ ನಿರ್ವಹಿಸದವನು ಶೀಲವಂತನಾಗಿದ್ದರೂ ಉಪಯೋಗವಿಲ್ಲ. ಯೋಗ್ಯವಾದ ಜ್ಞಾನವನ್ನು ಪಡೆಯದೆ ನೂರುವರ್ಷ ಬದುಕಿದರೂ ಆ ಜೀವನಕ್ಕೆ ಬೆಲೆಯಿಲ್ಲ. ದೇವರನ್ನು ಮನಸ್ಸಿನಲ್ಲಿ ಪೂರ್ತಿ ತುಂಬಿಕೊಂಡು ಮಾಡುವ ಧ್ಯಾನವೇ ಶ್ರೇಷ್ಠವಾದುದು, ಹಾಗೆ ಮಾಡದವನ ಧ್ಯಾನ ವ್ಯರ್ಥವೇ ಸರಿ.

ಗಂಡನ ಮಾತನ್ನು ಅರ್ಥಮಾಡಿಕೊಂಡು ನಡೆಯದ ಹೆಂಡತಿಯು ಆ ಸ್ಥಾನಕ್ಕೆ ಅರ್ಹಳಲ್ಲ. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಅರ್ಥಮಾಡಿಕೊಂಡು. ಒಂದಾಗಿ ನಡೆಸುವುದೇ ಸ್ನೇಹ. ಹಾಗೆ ಮಾಡದ ಸ್ನೇಹವು ಸ್ನೇಹವೇ ಅಲ್ಲ. ಮನುಷ್ಯರು ಯಾರು ಕೂಡ ತಾವು ಏನನ್ನಾದರೂ ನೀಡಿ ಅದರ ಫಲವಾಗಿ ಮಾನವ ಜನ್ಮ ತಾಳಿದವರಲ್ಲ. ಹಾಗಾಗಿ ಯಾವುದನ್ನೂ ಅತಿಯಾಗಿ ಬಯಸಿ ಕೊರಗುವ ಅಗತ್ಯವಿಲ್ಲ. ಆದಿಕೇಶವನೇ ನಮ್ಮವನಾಗಿರುವಾಗ ಬೇರೆ ಹಲವು ದೇವರ ಅಗತ್ಯವಿಲ್ಲ.

# ಮಳೆಯ ದಯಮಾಡೋ

– ಹೆಳವನಕಟ್ಟೆ ಗಿರಿಯಮ್ಮ

## ಪ್ರವೇಶ

ಸುಮಾರು ಕ್ರಿ.ಶ. 15–16ನೇ ಶತಮಾನದಲ್ಲಿ ಜೀವಿಸಿದ್ದ ಕೀರ್ತನಕಾರರಾದ ಪುರಂದರ ದಾಸ ಹಾಗೂ ಕನಕದಾಸರ ಕೀರ್ತನೆಗಳನ್ನು ವಿದ್ಯಾರ್ಥಿಗಳು ಈಗಾಗಲೇ ಪರಿಚಯ ಮಾಡಿಕೊಂಡಿದ್ದಾರೆ. ಕೀರ್ತನೆಗಳ ಕುರಿತು ಆಸಕ್ತಿಯನ್ನು ಹೊಂದಿರುತ್ತಾರೆ. ಕೀರ್ತನೆಯನ್ನು ಬರೆದಿರುವ ಮಹಿಳೆಯರ ಕುರಿತು ತಿಳಿದಿರುವಿರೋ? ಎಂದು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ತಿಳಿದಿದ್ದಲ್ಲಿ ಅವರು ಹೇಳುತ್ತಾರೆ. ಮಹಿಳೆಯರೂ ಕೀರ್ತನೆಗಳನ್ನು ಬರೆದಿರುವರೆಂದು ತಿಳಿಸುವುದು. ಹೆಳವನಕಟ್ಟೆ ಗಿರಿಯಮ್ಮನ ಪರಿಚಯವನ್ನು ಮಾಡಿಕೊಡುವುದು.

## ಕವಿ ಪರಿಚಯ

ಸುಮಾರು ಕ್ರಿ.ಶ.18ನೇ ಶತಮಾನದಲ್ಲಿ ಜೀವಿಸಿದ್ದ ಹೆಳವನಕಟ್ಟೆ ಗಿರಿಯಮ್ಮ ಕೀರ್ತನೆಗಳನ್ನು ರಚನೆ ಮಾಡಿರುವ ಮಹಿಳೆಯರಲ್ಲಿ ಪ್ರಮುಖಳು. ಆಕೆ ದೇವರಲ್ಲಿ ಅಪಾರ ಭಕ್ತಿ ಇರುವವಳಾಗಿದ್ದಳು. ಅದನ್ನು ಅವಳ ಕೃತಿಗಳಲ್ಲೂ ಕಾಣಬಹುದು.ಅವಳ ಕೃತಿಗಳು ಸರಳವೂ ಸುಂದರವೂ ಆಗಿದ್ದು ಭಕ್ತಿ ರಸ ಪ್ರಧಾನವಾದುದರಿಂದ ನಿರರ್ಗಳವಾಗಿ ಓದಿಸಿಕೊಂಡು ಹೋಗುತ್ತವೆ. ಗಿರಿಯಮ್ಮನಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಗಿರಿಯಮ್ಮ ಬದುಕಿದ್ದಾಗಲೇ ದಂತಕತೆಯಾದವಳು. ಈಕೆ ಭಕ್ತಿಯ ಜೊತೆಗೆ ತಾನಿದ್ದ ಸಾಮಾಜಿಕರ ದುಃಖಕ್ಕೂ ಸ್ಪಂದಿಸಿದ್ದಳು. ಗಿರಿಯಮ್ಮನ ಅಂಕಿತ ಹೆಳವನಕಟ್ಟೆ ರಂಗ. ಈಕೆಯ ಸಂಗೀತಕ್ಕೆ ಮುಖ್ಯ ಪ್ರೇರಣೆ ರಂಗನಾಥನ ಮೇಲಿನ ಭಕ್ತಿ. ವೈವಿಧ್ಯಮಯ ಕೃತಿಗಳನ್ನೊಳಗೊಂಡ ಈಕೆಯ ಸಾಹಿತ್ಯವನ್ನು ಅಧ್ಯಯನ ದೃಷ್ಟಿಯಿಂದ ಎರಡು ವಿಭಾಗ ಮಾಡಬಹುದು. 1) ಕೀರ್ತನೆಗಳು, 2) ಲಘು ಕಾವ್ಯಗಳು. ಆಕೆಯ 40ಕ್ಕೂ ಹೆಚ್ಚು ಕೀರ್ತನೆಗಳು ದೊರೆತಿವೆ. ಲಘು ಕಾವ್ಯಗಳಲ್ಲಿ ಚಂದ್ರಹಾಸನ ಕತೆ, ಉದ್ಧಾಳಿಕನ ಕತೆ, ಸೀತಾ ಕಲ್ಯಾಣ, ಶಂಕರಗಂಡನ ಹಾಡು, ಲವಕುಶರ ಕಾಳಗ, ಬ್ರಹ್ಮ ಕೊರವಂಜಿ, ಕೃಷ್ಣ ಕೊರವಂಜಿ ಎಂಬಿವು ಉಪಲಬ್ಧವಾಗಿವೆ. ಕಾಳಿಯ ಮರ್ದನ, ಗಜೇಂದ್ರ ಮೋಕ್ಷ, ಪತಿ ದಾನಕೊಟ್ಟ ಹಾಡು, ಭಾಗವತ, ರಾಮಾಯಣ ಇವು ಅನುಪಲಬ್ಧ.

ಟಿ.ವಿ. ವೆಂಕಟಾಚಲ ಶಾಸ್ತ್ರಿಯವರು ಈ ಕೃತಿಯ ಬಗ್ಗೆ 'ವಸ್ತು ಯಾವುದೇ ಇರಲಿ ತನ್ನ ವ್ಯಕ್ತಿ ವೈಶಿಷ್ಟ್ಯದ ಸ್ವಾನುಭವ ಸಂಪತ್ತಿನ ಬಣ್ಣವನ್ನು ತುಂಬಿಸಿ ಓದುಗರು ಅವುಗಳನ್ನು ಆತ್ಮೀಯತೆಯಿಂದ ಅನುಭವಿಸುವಂತೆ ಮಾಡುವ ಕವಿ ಪ್ರಕೃತಿ ಗಿರಿಯಮ್ಮನವರಿಗೆ ವಿಶೇಷ' ಎಂದಿರುವರು. ಸಕಾಲಕ್ಕೆ ಮಳೆ ಬರದೆ ಇದ್ದಾಗ ಜನರು ಚಡಪಡಿಸುತ್ತಾರೆ. ನೀರಿಲ್ಲದೆ ಜೀವಿಸಲು ಅಸಾಧ್ಯ. ಜನರ ಕಷ್ಟದ ಸ್ಥಿತಿಯನ್ನು ಕಂಡು ಅದರ ಪರಿಹಾರಕ್ಕಾಗಿ ಮಳೆ ಬರುವಂತೆ ಮಾಡೆಂದು ಭಕ್ತಿಯಿಂದ ದೇವರಲ್ಲಿ ಪ್ರಾರ್ಥಿಸುವುದನ್ನು ಈ ಕೀರ್ತನೆಯಲ್ಲಿ ಕಾಣಬಹುದು.

ಕೀರ್ತನೆಯನ್ನು ವಿದ್ಯಾರ್ಥಿಗಳಿಂದ ಓದಿಸುವುದು/ಹಾಡಿಸುವುದು.

## ಚಟುವಟಿಕೆಗಳು

ನವೀನ ಪದಗಳ ಅರ್ಥವನ್ನು ಬರೆಯಲು ಸೂಚಿಸುವುದು. ಅದನ್ನು ಬರೆದು ಓದಲಿ ಅಗತ್ಯವಾದಲ್ಲಿ ಅರ್ಥಕೋಶವನ್ನು ಅವರು ನೋಡಲಿ. ಅವರಿಗೆ ತಿಳಿಯದ ಶಬ್ದಗಳ ಅರ್ಥವನ್ನು ಅಧ್ಯಾಪಕರು ತಿಳಿಸುವುದು.

## ಪದ ವಿಂಗಡಣೆ

ಪದಗಳನ್ನು ವಿಂಗಡಿಸಿ ಬರೆಯಲು ಹೇಳುವುದು.

| | | | |
|---|---|---|---|
| ಉದಾ: | ಉಳಿಯದು + ಈ | = | ಉಳಿಯದೀ |
| | ಬಾಯಿ + ಆರಿ | = | ಬಾಯಾರಿ |
| | ತೃಷೆ + ಅಡಗದೆ | = | ತೃಷೆಯಡಗದೆ |
| | ಬಿಡುತಿಹವು + ಅಯ್ಯ | = | ಬಿಡುತಿಹವಯ್ಯ |
| | ದ್ರವ + ಕುಂದಿ | = | ದ್ರವಗುಂದಿ |
| | ಸಂದೇಹ + ಇನ್ಯಾಕೆ | = | ಸಂದೇಹವಿನ್ಯಾಕೆ |
| | ಮೂರ್ಛೆ + ಕೊಂಡು | = | ಮೂರ್ಛೆಗೊಂಡು |

## ದ್ವಿರುಕ್ತಿ ಪದಗಳು

ಈ ಕೀರ್ತನೆಯಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಗುರುತಿಸಲು ಹೇಳುವುದು.ಅದು ಬೀರುವ ಪರಿಣಾಮವನ್ನು ಅವರು ಕಂಡುಕೊಳ್ಳಲಿ.

ಉದಾ: ದೆಸೆದೆಸೆಗೆ ಅಡಿಗಡಿಗೆ

ಮೊಗೆಮೊಗೆದು ಬೇಗಬೇಗನೆ ಇತ್ಯಾದಿ.

## ದ್ವಿರುಕ್ತಿ

ಭಾಷೆಯಲ್ಲಿ ಒಂದೇ ಪದವನ್ನು ಎರಡು ಸಲ ಸೇರಿಸಿ ಜೊತೆಯಾಗಿ ಪ್ರಯೋಗಿಸುವುದು ದ್ವಿರುಕ್ತಿಯೆನಿಸಿಕೊಳ್ಳುತ್ತದೆ. ಪರಿಣಾಮ ತೀವ್ರತೆಯನ್ನು ಹೆಚ್ಚಿಸುವುದಕ್ಕಾಗಿ ಹೀಗೆ ಮಾಡಲಾಗುತ್ತದೆ.

### ಚಾಂದ್ರಮಾನ, ಸೌರಮಾನ ತಿಂಗಳುಗಳು

ಚಾಂದ್ರಮಾನ, ಸೌರಮಾನ ತಿಂಗಳುಗಳ ಹೆಸರನ್ನು ಅನುಕ್ರಮವಾಗಿ ಹೇಳಲು ಸೂಚಿಸುವುದು.

**ಸೌರಮಾನ** : ಮೇಷ, ವೃಷಭ, ಕರ್ಕಾಟಕ, ಮಿಥುನ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ, ಮೀನ.

**ಚಾಂದ್ರಮಾನ** : ಚೈತ್ರ, ವೈಶಾಖ, ಅಶ್ವೀಜ (ಅಶ್ವಯುಜ), ಕಾರ್ತಿಕ, ಮಾರ್ಗಶಿರ, ಪುಷ್ಯ, ಜೇಷ್ಠ, ಅಷಾಢ, ಶ್ರಾವಣ, ಭಾದ್ರಪದ, ಮಾಘ, ಫಾಲ್ಗುಣ.

ಇವುಗಳನ್ನು ವಿದ್ಯಾರ್ಥಿಗಳು ಬರೆದುಕೊಳ್ಳಲಿ. ಇತರ ಪದ್ಧತಿಗಳ ತಿಂಗಳುಗಳ ಹೆಸರನ್ನು ಸಂಗ್ರಹಿಸಲಿ.
ಉದಾ: ತುಳು ತಿಂಗಳುಗಳು – ಪಗ್ಗು, ಬೇಸ್ಯ, ಕಾರ್ತೆಲ್, ............. ಇತ್ಯಾದಿ.

### ಆಶಯ ಗುರುತಿಸಿ ಬರೆಯುವುದು

ನೀರಿನ ಕೊರತೆಯ ಸಮಸ್ಯೆಯನ್ನು ಇಂದು ಎಲ್ಲರೂ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಈ ಕುರಿತು ಪ್ರಶ್ನಿಸುವುದು. ಅವರು ಅವರ ಅನುಭವವನ್ನು ಹೇಳುತ್ತಾರೆ. ಅದೇ ವಿಷಯ ಈ ಕೀರ್ತನೆಯಲ್ಲೂ ಬಂದಿದೆ ಎಂದು ತಿಳಿಸಿ ಬಳಿಕ ಅವರನ್ನು ಗುಂಪುಗಳಾಗಿ ವಿಂಗಡಿಸಿ ಕೀರ್ತನೆಯ ಒಂದೊಂದು ಪದ್ಯವನ್ನು ಹಾಡಿಸುವುದು/ಓದಿಸುವುದು. ಬಳಿಕ ಚರ್ಚಿಸಿ ಅದರ ಆಶಯವನ್ನು ಅವರು ಹೇಳಲಿ. ಎಲ್ಲರ ಅಭಿಪ್ರಾಯವನ್ನು ಕ್ರೋಡೀಕರಿಸಿ ಎಲ್ಲರೂ ಬರೆದುಕೊಳ್ಳುವುದು ಅಧ್ಯಾಪಕರು ಅಗತ್ಯವಿದ್ದಲ್ಲಿ ಮಾರ್ಗದರ್ಶನ ನೀಡುವುದು.

ಅಡಕ ಮುದ್ರಿಕೆಗಳನ್ನು ಉಪಯೋಗಿಸಿ ಕೀರ್ತನೆಯನ್ನು ಕೇಳಿಸುವುದು. ಕೀರ್ತನೆಯ ಸೌಂದರ್ಯವನ್ನು ತಿಳಿಯುವಂತೆ ಮಾಡುವುದು.

### ಆಸ್ವಾದನಾ ಟಿಪ್ಪಣಿ

ವಿದ್ಯಾರ್ಥಿಗಳಿಂದ ಕೀರ್ತನೆಯ ಆಸ್ವಾದನಾ ಟಿಪ್ಪಣಿ ಬರೆಸುವುದು. ಅವನ್ನು ತರಗತಿಯಲ್ಲಿ ಮಂಡಿಸಲಿ.

## ಮನವಿ ಪತ್ರ

ನೀರಿನ ಕೊರತೆಯನ್ನು ವಿದ್ಯಾರ್ಥಿಗಳೂ ಅವರ ಮನೆಗಳಲ್ಲಿ ಅನುಭವಿಸುತ್ತಿರಬಹುದು. ಅದರ ಪರಿಹಾರಕ್ಕಾಗಿ ಅವರು ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಮನವಿ ಪತ್ರವೊಂದನ್ನು ಸಿದ್ಧಪಡಿಸಲಿ. ತರಗತಿಯಲ್ಲಿ ಓದಿ ಸೂಕ್ತ ತಿದ್ದುಪಡಿ ಮಾಡಿ ಎಲ್ಲರ ಅಭಿಪ್ರಾಯ ಪಡೆದು ಸೂಕ್ತ ತಿದ್ದುಪಡಿ ಮಾಡಿ ಪರಿಷ್ಕರಿಸಲಿ.

## ಚರ್ಚಾಕೂಟ

ಚರ್ಚಾಕೂಟದ ಸಿದ್ಧತೆ : ದಿನಾಂಕ, ವಿಷಯದ ಆಯ್ಕೆ, ವಿಷಯದ ಹಂಚಿಕೆ, ಸಮಯದ ಹಂಚಿಕೆ, ಸಿದ್ಧತೆ.

ನೀರಿನ ಅಭಾವ ನೀಗಿಸಲು ಕೊಳವೆಬಾವಿ ನಿರ್ಮಾಣ ಮಾಡುತ್ತಿರುವುದನ್ನು ಕಾಣಬಹುದು. ಆದರೆ ಅದರಿಂದಾಗಿ ಬೇರೆ ಕೆಲವು ಸಮಸ್ಯೆಗಳೂ ಹುಟ್ಟಿಕೊಂಡಿರುವುದನ್ನು ಎಲ್ಲರೂ ಗಮನಿಸಿರಬಹುದು. ಈ ವಿಷಯದಲ್ಲಿ ಚರ್ಚಾಕೂಟವನ್ನು ನಡೆಸಿ, ಅಲ್ಲಿ ಮೂಡಿಬಂದ ಅಭಿಪ್ರಾಯವನ್ನು ಕ್ರೋಡೀಕರಿಸಿ ಲೇಖನ ಬರೆಯುವುದು. ಅದನ್ನು ಪತ್ರಿಕೆಯ ಓದುಗರ ಓಲೆ ವಿಭಾಗದಲ್ಲಿ ಪ್ರಕಟಿಸಲು ಕಳುಹಿಸಬಹುದು.

## ಟಿಪ್ಪಣಿ

ನೀರಿಗಾಗಿ ಬವಣೆ ಪಡುವ ಜನರ ಜೀವಜಾಲಗಳ ಕುರಿತು ಕವಯಿತ್ರಿ ಸ್ಪಂದಿಸಿದ ಬಗ್ಗೆ ವಿದ್ಯಾರ್ಥಿಗಳು ತಮ್ಮ ಮಾತಿನಲ್ಲಿ ವಿವರಿಸಿ ಟಿಪ್ಪಣಿ ಬರೆಯಲಿ.

## ಜೀವನ ಚರಿತ್ರೆ

ವಿದ್ಯಾರ್ಥಿಗಳು ಈ ಘಟಕದಲ್ಲಿ ಬಂದಿರುವ ಮೂವರು ಕೀರ್ತನಕಾರರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಬರೆಯಲಿ.

## ಸಾರಾಂಶ

ಕೀರ್ತನ ಸಾಹಿತ್ಯ ರಚನೆ ಮಾಡಿದವರ ಪಂಕ್ತಿಯಲ್ಲಿ ಕಾಣಿಸುವ ಹೆಳವನಕಟ್ಟೆ ಗಿರಿಯಮ್ಮ ನಡುಗನ್ನಡ ಕಾಲದ ಕನ್ನಡದ ಮುಖ್ಯ ಕವಯಿತ್ರಿಯರಲ್ಲಿ ಒಬ್ಬರು. ಪ್ರಪಂಚದ ಜೀವಜಾಲಗಳ ಬದುಕಿಗೆ ನೀರು ಅನಿವಾರ್ಯ. ನೀರಿನ ಕೊರತೆಯುಂಟಾದಾಗ ಮನುಷ್ಯರಾದಿಯಾಗಿ ಎಲ್ಲ ಜೀವಿಗಳೂ ಕಷ್ಟ ಪಡುತ್ತವೆ. ಇಂದು ನಮಗೂ ಅದರ ಅನುಭವವಾಗುತ್ತಿದೆ. ನೀರಿನ ಮಹತ್ವವನ್ನು ಅರಿತ ಗಿರಿಯಮ್ಮ ಇಲ್ಲಿ ಮಳೆಗಾಗಿ ಬೇರೆ ದಾರಿ ಕಾಣದೆ ದೇವರಲ್ಲಿ ಪ್ರಾರ್ಥಿಸುತ್ತಾಳೆ. ಈ ಲೋಕವನ್ನು ನಡೆಸುವ ಅದೃಶ್ಯ ಶಕ್ತಿಯೊಂದಿದೆ ಎಂಬುದು ಅವಳ ನಂಬಿಕೆ. ಅಂತಹ ಶಕ್ತಿಯಾದ ದೇವರ ದೃಷ್ಟಿ ಭೂಮಿಯ ಮೇಲಿಲ್ಲದಿದ್ದರೆ ಈ ಲೋಕ ಇರಲಾರದು ಎಂದು ಮಳೆಗಾಗಿ ದೇವರನ್ನು ಬೇಡಿಕೊಳ್ಳುತ್ತಾಳೆ.

ಭೂಮಿಯಲ್ಲಿನ ದಯನೀಯ ಸ್ಥಿತಿಯನ್ನು ವಿವರಿಸಿ ಹೇಳುತ್ತಾಳೆ. ಪಕ್ಷಿ, ಮೃಗಾದಿಗಳು, ಹಸಿವು, ಬಾಯಾರಿಕೆಗಳಿಂದ ಕೆರೆಗೆ ಬಂದು ಬತ್ತಿದ ಕೆರೆಯನ್ನು ನೋಡಿ ಬಾಯಾರಿಕೆಯನ್ನು ನೀಗಲಾರದೆ ಹೆದರಿಕೊಂಡು ಮೂರ್ಛೆಹೊಂದಿ ದಿಕ್ಕು ದಿಕ್ಕುಗಳನ್ನು ನೋಡಿ ಹಂಬಲಿಸುತ್ತಿವೆ.

ಹೆಣ್ಣು ಮಕ್ಕಳ ಸ್ಥಿತಿ ಇದಕ್ಕಿಂತಲೂ ಕಷ್ಟಕರವಾಗಿದೆ. ಬಿಸಿಲ ಬೇಗೆಯಿಂದಾಗಿ ಬತ್ತಿ ಹೋಗುತ್ತಿರುವ ಬಾವಿಯ ನೀರನ್ನು ಬೊಗಸೆಯಲ್ಲಿ ಎತ್ತಿ ಪಾತ್ರೆಗಳಲ್ಲಿ ತುಂಬಿಸಿ ಚಿಂತೆಯಿಂದಲೇ ಪ್ರತಿದಿನ ಕಷ್ಟಪಡುತಿದ್ದಾರೆ. ಇದಕ್ಕೆಲ್ಲಾ ಪರಿಹಾರವಾಗಿ ಬೇಗನೇ ಮಳೆಯನ್ನು ಸುರಿಸೆಂದು ದೇವರಲ್ಲಿ ಬೇಡಿಕೊಳ್ಳುತ್ತಿದ್ದಾಳೆ.

ಹಳ್ಳಿಯ ಮನೆ ಮನೆಗಳಲ್ಲಿ ಅಗತ್ಯವುಳ್ಳ ನೀರಿನ ಸಂಗ್ರಹಕ್ಕಾಗಿ ಕಷ್ಟಪಡುವವರು ಮಹಿಳೆಯರೇ ಆಗಿದ್ದಾರೆ. ದೂರ ದೂರ ನಡೆದು ಹೋಗಿ ನೀರು ತರುವ ಬಡ ಮಕ್ಕಳ ಮಹಿಳೆಯರ ಬವಣೆ ಎಂಥವರ ಮನಸ್ಸನ್ನೂ ಕರಗಿಸುವಂತದ್ದು. ಕವಯತ್ರಿ ಹೆಂಗರುಳಿನಿಂದ ಈ ಸ್ಥಿತಿಯನ್ನು ನೋಡಿ ಪುಟಿದೆದ್ದ ಭಾವನೆಗಳೇ ಇಲ್ಲಿ ಮೂಡಿದಂತಿದೆ.

ತಿಂಗಳುಗಳು ಉರುಳುತ್ತಿವೆ. ಜೇಷ್ಠ, ಆಷಾಡ, ಶ್ರಾವಣ ಮಾಸಗಳು ಕಳೆದು ಹೋದವು. ಈಗ ಭಾದ್ರಪದ ಮಾಸ ಬಂದಿದೆ. ಇನ್ನಾದರೂ ಇಂದ್ರನಿಗೆ ಹೇಳಿ ಮಳೆಯನ್ನು ಸುರಿಸೋ, ತಡಮಾಡಬೇಡ ಅಷ್ಟೊಂದು ಕಷ್ಟ ಉಂಟಾಗಿದೆಯೆಂದು ತನ್ನ ಇಷ್ಟ ದೈವವಾದ ಹೆಳವನಕಟ್ಟೆ ರಂಗನಲ್ಲಿ ಬೇಡಿಕೊಳ್ಳುತ್ತಾಳೆ.

### ಪರಾಮರ್ಶನ ಗ್ರಂಥಗಳು


- ದಾಸ ಸಾಹಿತ್ಯ, ಸಂಪುಟ – ಸಂ. ಸುಧಾಕರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ದಾಸ ಸಾಹಿತ್ಯ ಮತ್ತು ಸಂಸ್ಕೃತಿ – ಸಾ.ಕೃ.ರಾಮಚಂದ್ರ ರಾವ್
- ಹರಿದಾಸ ಸಾಹಿತ್ಯಸಾರ – ಜಿ.ವರದರಾಜ ರಾವ್


* * *